ಜನಪದ ವಿಚಾರ


ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೭ ಡಿಸೆಂಬರ್-೨೦೦೬ ಸಂಚಿಕೆ-೫



ಇಂಗ್ಲಿಷ್‌ಗೆ ಮುಖಾಮುಖಿಯಾಗಿ ಕನ್ನಡ

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ಡಿಸೆಂಬರ್-೨೦೦೬
ಸಂಪುಟ-೭
ಸಂಚಿಕೆ-೫

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

☎ ೦೮೨೩೬ ೨೯೮೭೫೪
e-mail - janapada@yahoo.com

ಎಲ್ಲರಂಥವನಲ್ಲ ನಮ್ಮ ಈ ಗೊಮ್ಮಟ
ಮಳೆಯಲ್ಲು ಬಿಸಿಲಲ್ಲು ಇವನೊಬ್ಬನೇ ಮನ್ಮಥ
ಏನು ಮೈ ಏನು ಮಾಟ ಏನುದಾತ್ತ ನೋಟವು
ಹುಟ್ಟಿದುದಕೆ ಸಾರ್ಥಕವಾಯ್ತೋ ಇವನು ನಿಂತ
ಬೆಟ್ಟವು

ರಾಜ್ಯ ಬಿಟ್ಟು ವಿರಾಜಮಾನ ಈ ವರ್ಧಮಾನ
ಯುಗದಗಲ ಜಗದಗಲ ಈ ಪ್ರವರ್ಧಮಾನ
ಎಂಥ ಮನದ ಎಂಥ ಜನದ ಜಿನ ಕಲ್ಪನವೀತನ
ಬಾಹುಬಲಕ್ಕಿಂತ ಮನೋಬಲವೆ ಬಲವೆಂದವನ
ಪಾದ ನಾವು ತಬ್ಬುವೆವು ಬೆರಳ ನಾವು
ಮುಟ್ಟುವೆವು
ತಲೆಯೆತ್ತಿ ಬೆರಗಾಗಿ ಎತ್ತರೆತ್ತರ ನೋಡುವೆವು

ನಿಂತರಿಂತು ನಿಲಬೇಕಯ್ಯ ಎಂದು
ಹೇಳಿಕೊಳ್ಳುವೆವು
ಗೆದ್ದರೆ ಹೀಗೆ ಗೆಲಬೇಕಯ್ಯ ಎಂದು
ಕೊಂಡಾಡುವೆವು
ಹಾಲು ತುಪ್ಪ ಕಾಡಜೇನು ಮಹಾ ಮಸ್ತಕಾಭಿಷೇಕ
ಸುರಿದರೆಷ್ಟೂ ಉದಕವನೂ ಇವನಿಗೆಲ್ಲ ರೂಪಕ
ಸವಣರಾಗದವರು ಯಾರು ಇಂಥ ಜಿನನ
ಮುಂದೆ
ಉಳ್ಳವರೂ ಇಲ್ಲದವರೂ ತೊಪ್ಪದೊಂದೆ ಮಂದೆ

ಕಾಲಚಕ್ರ ಸಾಗೀತೆ ಇವನ ಚಿತ್ತದೆಡೆಗೆ
ಧರ್ಮಚಕ್ರ ಉರುಳೀತೆ ಇವನ ಸತ್ಯದೊಳಗೆ
ಕೇಳಬೇಕು ಎಲ್ಲರೂ ಕೇಳಿದವರೆ ಉತ್ತರ
ಇಲ್ಲದಿದ್ದರೇನು ಬಂತು ಏರಿ ಅಷ್ಟು ಎತ್ತರ

– ಕೆ. ವಿ. ತಿರುಮಲೇಶ್

ವಿಚಾರ ದೀಪ್ತಿ

ಇಂಗಿ ಹೋಗುತಿದೆ ಇಂಗ್ಲೀಷಿನ ಮರುಭೂಮಿಯಲಿ
ನಿನ್ನ ಮಕ್ಕಳ ಶಕ್ತಿ - ಬುದ್ಧಿ - ಪ್ರತಿಭಾ ;
ರಾಷ್ಟ್ರನಾಯಕ ಮನದಿ ವಿವೇಕರೂಪದಿ ಮೂಡಿ,
ಓ ರಸಮಯೀ ಸರಸ್ವತಿಯೆ, ಪೊರೆ ಬಾ !

* * *

ಬೇಡ, ಬೇಡ, ಬೇಡ !
ಮಕ್ಕಳ ಈ ಕೊಲೆ ಬೇಡ !
ತುಸು ಯೋಚಿಸೋ, ಹೇ ವಿದ್ವನ್ಮೂಢ !
ತಪ್ಪಿಸೋ ಈ ಇಂಗ್ಲೀಷಿನ ಕೇಡ !

* * *

ಚೀಣಿಯರ ಧಾಳಿ ಬರಿಹಿಮದ ಧೂಳಿ !
ತೂರಿ ಹೋಗುವುದು ಸ್ವಲ್ಪ ತಾಳಿ !
ಆದರೀ ಕರಾಳಿ ಇಂಗ್ಲಿಷಿನ ಗಾಳಿ
ಬೀಸಿ ಹೋಗುವುದೆ ? ಸ್ವಲ್ಪ ಕೇಳಿ ?

* * *

ಓ ಯಾರಾದರೂ ಬನ್ನಿ !
ಎಲ್ಲಿಂದಾದರೂ ಬನ್ನಿ !
ಏನಾದರೂ ಮಾಡಿ.
ಹೆಣಹೊರೆಯ ಇಂಗ್ಲಿಷಿನಿಂದೆಮ್ಮ ಪಾರು ಮಾಡಿ !

– ಕುವೆಂಪು

ಇಂಗ್ಲಿಷ್‌ಗೆ ಮುಖಾಮುಖಿಯಾಗಿ ಕನ್ನಡ

-ಸುರೇಂದ್ರ ಕೌಲಗಿ

ತಮ್ಮ ಸಂಸ್ಕೃತಿಯನ್ನು ಬೆಳೆಸಿದ ಭಾಷೆಯನ್ನೇ ಜನರು ಕಡೆಗಾಣಿಸುವ ದುಃಸ್ಥಿತಿ ಉಂಟಾಗುತ್ತದೆಂದು ೧೯೯೦ರ ಮೊದಲು ಯಾರೂ ಊಹಿಸಿರಲಿಲ್ಲ. ಜಾಗತೀಕರಣದ ಪ್ರಕ್ರಿಯೆ ಶುರುವಾದ ಮೇಲೆ ಕನ್ನಡ ಭಾಷೆಯನ್ನೊಳಗೊಂಡು ಎಲ್ಲ ಭಾರತೀಯ ಭಾಷೆಗಳು ಅವಜ್ಞೆಗೆ ಒಳಗಾಗುತ್ತಾ ಬಂದವು. ಜಾಗತೀಕರಣ ತನ್ನ ಓಘದೊಂದಿಗೆ ಕಂಪ್ಯೂಟರ್‌ನಂಥ ತಂತ್ರಾಂಶವನ್ನು ಸಾರ್ವತ್ರಿಕಗೊಳಿಸಿದ ಮೇಲಂತೂ ಭಾರತೀಯ ಭಾಷೆಗಳು ಪಕ್ಕಕ್ಕೆ ಸರಿದು ಇಂಗ್ಲಿಷ್‌ಗೆ ಸ್ಥಾನ ಬಿಟ್ಟುಕೊಡುತ್ತಾ ಬಂದವು. ಜನರು ಕ್ರಮೇಣ ತಮ್ಮ ಮಾತೃಭಾಷೆಯನ್ನೇ, ಸಾಂಸ್ಕೃತಿಕ ಭಾಷೆಯನ್ನೇ, ಸಜೀವ ಭಾಷೆಯನ್ನೇ ತ್ಯಜಿಸಿ ಯಾವ ರೂಪದಲ್ಲಾದರೂ ಸರಿ. ಯಾವ ಹಂತದಲ್ಲಾದರೂ ಸರಿ ಇಂಗ್ಲಿಷನ್ನು ಕಡ್ಡಾಯವಾಗಿ ಪಡೆಯಬೇಕೆಂಬ ಛಲವನ್ನು ಸಾಧಿಸಿ ಹೊರಟಿರುವುದು ದುರಂತಕ್ಕೆ ಕಾರಣವಾಗುವುದೋ, ಸುಖಾಂತಕ್ಕೆ ಕಾರಣವಾಗುವುದೋ ಎಂಬುದನ್ನು ಕಾಲವೇ ನಿರ್ಧರಿಸಬಹುದು. ಆದರೆ ಇಂದಿನ ವಿಜ್ಞಾನಯುಗದಲ್ಲಿ ಕಾಲಕ್ಕೆ ಶರಣಾಗಿ ಕುಳಿತುಕೊಳ್ಳುವುದು ಆಧುನಿಕ ಜನರಿಗೆ ಶೋಭಿಸುವ ಮಾತಲ್ಲ. ಹಾಗಿದ್ದಮೇಲೆ ಜಾಗತೀಕರಣದ ಬಿರುಗಾಳಿಗೆ ಮುಖಾಮುಖಿಯಾಗಿ, ವೇಗವಾಗಿ ಬೆಳೆಯುತ್ತಿರುವ ತಂತ್ರಜ್ಞಾನ ಮತ್ತು ವಿಜ್ಞಾನಕ್ಕೆ ಮುಖಾಮುಖಿಯಾಗಿ ಕನ್ನಡ ಭಾಷೆಯನ್ನು ಹೇಗೆ ಸಬಲಗೊಳಿಸಬೇಕು, ಹೇಗೆ ಜನಪ್ರಿಯಗೊಳಿಸಬೇಕು, ತಮ್ಮ ಬೆಳವಣಿಗೆಗೆ ಕನ್ನಡ ಹೇಗೆ ಅನಿವಾರ್ಯವೆಂಬುದನ್ನು ಜನರಿಗೆ ಮನವರಿಕೆ ಮಾಡಿಕೊಡಬೇಕು ಎಂಬ ಸವಾಲನ್ನು ಸರ್ಕಾರ, ಮುಖ್ಯವಾಗಿ ಕನ್ನಡ ಜನ ಸ್ವೀಕರಿಸಬೇಕಾಗಿದೆ. ಇಲ್ಲಿ ಕನ್ನಡ ಜನ ಅಂದರೆ ಕೇವಲ ಕನ್ನಡ ಭಾಷೆ ಮಾತನಾಡುವವರಷ್ಟೇ ಅಲ್ಲ. ಸಾಹಿತಿಗಳಂತೂ ಸೇರಿಯೇ ಇದ್ದಾರೆ. ಇವರಲ್ಲದೆ ವಿಜ್ಞಾನವನ್ನು ಬಲ್ಲ ಕನ್ನಡಿಗರು, ತಂತ್ರಜ್ಞಾನದಲ್ಲಿ ಮುಂದುವರಿದ ಕನ್ನಡಿಗರು, ಅರ್ಥಶಾಸ್ತ್ರ ಬಲ್ಲ ಕನ್ನಡಿಗರು, ವಾಣಿಜ್ಯ ವ್ಯವಹಾರ, ಕೈಗಾರಿಕಾ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿರುವ ಕನ್ನಡಿಗರು, ತಾಂತ್ರಿಕ ಮಹಾವಿದ್ಯಾಲಯಗಳನ್ನು, ವೈದ್ಯಕೀಯ ವಿದ್ಯಾಲಯಗಳನ್ನು ನಡೆಸುತ್ತಿರುವ ಕನ್ನಡಿಗರು, ಆಕಾಶವಾಣಿ, ದೂರದರ್ಶನ, ಪತ್ರಿಕೆಗಳಂಥ ಮಾಧ್ಯಮದಲ್ಲಿರುವ ಕನ್ನಡಿಗರು ಮತ್ತು ಕರ್ನಾಟಕದಲ್ಲಿರುವ ಎಲ್ಲ ಬಗೆಯ ವಿಷಯಗಳ ವಿಶ್ವವಿದ್ಯಾನಿಲಯಗಳು ಹಾಗೂ

ಬೇರೆ ಬೇರೆ ತಾಂತ್ರಿಕ, ಶೈಕ್ಷಣಿಕ, ಆರೋಗ್ಯ, ಕೃಷಿ ಮುಂತಾದ ಕ್ಷೇತ್ರಗಳಲ್ಲಿ ಅನುಭವ ಪಡೆದಿರುವ ಕನ್ನಡಿಗರೂ ಸಹ ಸೇರಿದ್ದಾರೆ.

ಎರಡು ಸಾವಿರ ವರ್ಷಗಳಷ್ಟು ಹಳೆಯದಾದ ಕನ್ನಡ ಭಾಷೆಯಲ್ಲಿ ಮತ್ತು ಇತ್ತಿಚೆಗೆ ಯಾವ ಗಾತ್ರ, ಪ್ರಮಾಣ, ವ್ಯಾಪಕತೆಯಲ್ಲಿ ಕನ್ನಡ ಬೆಳೆದಿದೆಯೋ ಅಂಥ ಕನ್ನಡದಲ್ಲಿ ಯಾವುದೇ ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿಯ ದುಡಿಮೆಗೆ ಅಗತ್ಯವಾದ ಪಾರಿಭಾಷಿಕ ಶಬ್ದಗಳನ್ನು ರಚಿಸಬಹುದಾಗಿದೆ. ಅಂಥ ಸಾಮರ್ಥ್ಯ ಇಂದಿನ ಕನ್ನಡಕ್ಕಿದೆ ಮತ್ತು ಸಮರ್ಥರು ಕರ್ನಾಟಕದಲ್ಲಿ ಹಾಗೂ ಹೊರದೇಶ, ಹೊರನಾಡುಗಳಲ್ಲಿ ಇಲ್ಲದೆಯಿಲ್ಲ. ಪರಭಾಷಾ ವ್ಯಾಮೋಹವನ್ನು ಅತಿಯಾಗಿ ಕನ್ನಡಿಗರು ಬೆಳೆಸಿಕೊಳ್ಳುತ್ತಾರೆಂಬ ದೂರದೃಷ್ಟಿಯಿಂದ ಡಿ.ವಿ.ಜಿ. ಅಂದು ಹೇಳಿದ್ದ ಮಾತು ಈಗ ಅಗತ್ಯವೆನಿಸುತ್ತದೆ. ಅವರ ಪ್ರಕಾರ, “ಕನ್ನಡ ಸಾಹಿತ್ಯದ ಕೃತಯುಗ ಹಿಂದೆ ಮುಗಿದುಹೋಗಿಲ್ಲ ; ಮುಂದೆ ಬರಬೇಕಾಗಿದೆ. ಕನ್ನಡಿಗರಿಂದ ಮಾತ್ರವೇ ಅಲ್ಲದೆ ಇತರ ದೇಶಗಳಿಂದಲೂ ಮನ್ನಣೆ ಪಡೆಯಬಲ್ಲ ಕವಿಗಳೂ, ಕಲಾವಿದರೂ, ವಿಜ್ಞಾನಿಗಳೂ, ತತ್ವವೇತ್ತರೂ ಕನ್ನಡದಲ್ಲಿ ಹುಟ್ಟಬೇಕು. ಅಂಥ ಪ್ರತಿಭೆಯೂ, ಸ್ಫೂರ್ತಿಯೂ ತೇಜಸ್ಸು ನಮ್ಮಲ್ಲಿ ಅಂಕುರಿಸಬೇಕಾದರೆ ನಮ್ಮ ತಪಸ್ಸು ಎಂಥದ್ದಾಗಿರಬೇಕೆಂಬುದನ್ನು ವಿವರಿಸಿ ಹೇಳಬೇಕೆ?” ಈಗಾಗಲೇ ಕನ್ನಡದಲ್ಲಿ ವೈಜ್ಞಾನಿಕ ಶಬ್ದ ಸಂಪತ್ತನ್ನು ಬೆಳೆಸಿರುವ ಮಹನೀಯರಿದ್ದಾರೆ. ಅವರಿಗೆ ಹೆಚ್ಚಿನ ಪ್ರೋತ್ಸಾಹ, ಮನ್ನಣೆ, ಅವಕಾಶ ದೊರೆತಲ್ಲಿ ಅವರು ಕನ್ನಡವನ್ನು ಇಂಗ್ಲಿಷಿಗೆ ಮುಖಾಮುಖಿಯಾಗಿ ನಿಲ್ಲಿಸಬಲ್ಲರು. ತಕ್ಷಣಕ್ಕೆ ಅಂಥ ಮಹನೀಯರ ಹೆಸರನ್ನು ಸ್ಮರಿಸಿಕೊಳ್ಳಬಹುದು. ಅವರು ಜಿ.ಟಿ.ನಾರಾಯಣರಾವ್, ಚಿದಾನಂದಗೌಡರು, ಡಾ.ಶಿವಪ್ಪ, ಹಾಲ್ದೊಡ್ಡೇರಿ ಸುಧೀಂದ್ರ, ಭಾಷಾ ತಜ್ಞರಾದ ಜಿ.ವೆಂಕಟಸುಬ್ಬಯ್ಯ, ಪ್ರೊ.ಕೆ.ಶ್ರೀನಿವಾಸನ್ ಜೆ.ಆರ್.ಲಕ್ಷ್ಮಣರಾವ್ ಈಗಾಗಲೆ ವಿವಿಧ ತರಗತಿಗಳಿಗಾಗಿ, ವಿವಿಧ ಭಾಷೆಗಳ ಬಗ್ಗೆ ಪಠ್ಯ ಪುಸ್ತಕಗಳನ್ನು ಬರೆದಿರುವಂಥ ಲೇಖಕರು, ನಾಗೇಶ್ ಹೆಗಡೆ, ನರಸಿಂಹ ರಂಗನ್(ಮನು), ಕೆ.ಟಿ.ಗಟ್ಟಿ, ಡಾ.ನಾಗಲೋಟಿಮಠ, ಎನ್.ವಾಸುದೇವ ಹೀಗೆ ಇನ್ನೂ ಹತ್ತಾರು ಹೆಸರುಗಳನ್ನು ಹೇಳಬಹುದು.

ಕನ್ನಡವನ್ನು ಎಲ್ಲ ಕ್ಷೇತ್ರಗಳಲ್ಲಿ ಸಮರ್ಥವನ್ನಾಗಿ ಮಾಡಲು ಅಗತ್ಯವಿರುವ ಮುಖ್ಯ ಸಂಪನ್ಮೂಲಗಳಲ್ಲಿ ೨೦,೦೦೦ ವರ್ಷಗಳಷ್ಟು ಹಳೆಯದಾದ ಸಂಸ್ಕೃತ ಭಾಷೆಯಿದೆ. ಅಲ್ಲದೆ, ಸ್ವತಃ ಇಂಗ್ಲಿಷ್, ರಷಿಯನ್, ಜಪಾನಿ, ಜರ್ಮನ್, ಫ್ರೆಂಚ್ ಭಾಷೆಗಳಿಂದ ಅನಿವಾರ್ಯವೆನಿಸಿದಾಗ ಸೂಕ್ತ ಶಬ್ದಗಳನ್ನು ಪಡೆಯಬಹುದಾಗಿದೆ. ಎಲ್ಲರಿಗೂ ತಿಳಿದಿರುವಂತೆ ಯಾವುದೇ ಒಂದು ಭಾಷೆ ಬೆಳೆಯಬೇಕಾದರೆ ಆ ಭಾಷೆ ಸಮಾಜ ಜೀವನದ ಎಲ್ಲ ಕ್ಷೇತ್ರಗಳಲ್ಲಿ, ಅಡಿಗೆಮನೆಯಿಂದ ಪ್ರಾರಂಭಿಸಿ

ಚಂದ್ರಯಾನ ಸಂಶೋಧನೆಗೆ ಸಂಬಂಧಿಸಿದ ಕ್ಷೇತ್ರಗಳವರೆಗೆ ಬಳಕೆಗೆ ಬರುವಂತಾಗಬೇಕು. ಬಳಸಿದಾಗ ಭಾಷೆ ಬೆಳೆಯುತ್ತದೆ. ಇಂಗ್ಲಿಷ್ ಭಾಷೆಯ ಬೆಳವಣಿಗೆಯ ಇತಿಹಾಸವನ್ನು ನೋಡಿದರೆ ಈ ಸಂಗತಿ ಗೊತ್ತಾಗುತ್ತದೆ. ಭಾಷೆಯನ್ನು ಬೆಳಸಬೇಕಾದರೆ ಇಂಗ್ಲೆಂಡಿನವರಂತೆ, ಅಮೆರಿಕದವರಂತೆ ಸಾಮ್ರಾಜ್ಯವನ್ನೇ ಕಟ್ಟಲು ಹೊರಡಬೇಕಿಲ್ಲ. ಬದಲಿಗೆ ನಮ್ಮ ಭಾಷೆಯನ್ನು ನಾವು ನಮ್ಮ ಮನೆಯಲ್ಲಿ, ನಮ್ಮ ದಿನನಿತ್ಯದ ವ್ಯವಹಾರದಲ್ಲಿ, ಆಡಳಿತದಲ್ಲಿ, ಶಾಲೆ-ಕಾಲೇಜುಗಳಲ್ಲಿ ಎಷ್ಟು ಬಗೆಯಾಗಿ, ಎಷ್ಟು ರಚನಾತ್ಮಕವಾಗಿ, ಎಷ್ಟು ಸೃಜನಾತ್ಮಕವಾಗಿ, ಎಷ್ಟು ಪ್ರಯೋಗಶೀಲವಾಗಿ, ಎಷ್ಟು ಅಭಿಮಾನ ಪೂರ್ವಕವಾಗಿ ಬಳಸುತ್ತೇವೆಂಬುದನ್ನು ಅವಲಂಬಿಸಿದೆ. ಈ ಮನೋಭಾವ ಮನಸ್ಸಿನಲ್ಲಿ ಮೂಡಬೇಕಾದರೆ, ಈ ದೃಷ್ಟಿ ಜೀವನದ ಕೈಂಕರ್ಯಗಳಲ್ಲಿ ಮೂಡಬೇಕಾದರೆ ಕನ್ನಡ ಮಕ್ಕಳನ್ನು ಕನ್ನಡದ ವಾತಾವರಣದಲ್ಲಿಯೇ ಬೆಳಸಬೇಕಾಗುತ್ತದೆ. ಅವರು ಬೆಳೆದು ಯುವಕರಾದಂತೆ ಕನ್ನಡ ಭಾಷೆಯ ಬೆಳವಣಿಗೆಯ ಹರಿಕಾರರಾಗುತ್ತಾರೆ. ಇದಕ್ಕೆಲ್ಲ ಬಹಳ ಪೂರ್ವಸಿದ್ಧತೆ ಬೇಕಾಗುತ್ತದೆ. ಈ ಪೂರ್ವಸಿದ್ಧತೆಯನ್ನೇ ಡಿ.ವಿ.ಜಿ. ತಪಸ್ಸು ಎಂದು ಕರೆದಿರುವುದು.

ಇಂದು ಇಂಗ್ಲಿಷ್‌ನ ಬಗ್ಗೆ ಇಷ್ಟೊಂದು ವ್ಯಾಮೋಹ ಏಕೆ ಬೆಳೆಯುತ್ತಿದೆ? ಇಂಗ್ಲಿಷ್ ಭಾಷೆಯ ಬಳಕೆಯ ವಿಷಯದಲ್ಲಿ ಶೋಷಕರು, ಶೋಷಿತರು ಎಂಬ ಪದಗಳ ಬಳಕೆ ಏಕೆ ಆಗುತ್ತಿದೆ? ನಗರವಾಸಿಗಳು, ಗ್ರಾಮವಾಸಿಗಳು ಎಂಬ ಭೇದಜನಕ ಶಬ್ದಗಳು ಉಪಯೋಗಕ್ಕೆ ಏಕೆ ಬರುತ್ತಿವೆ? ಇಂಗ್ಲಿಷ್ ಓದಿದವರೆಲ್ಲ ಇಂಗ್ಲೆಂಡಿಗೆ ಅಮೆರಿಕಕ್ಕೆ ಹೋಗುವುದಕ್ಕಾಗುವುದಿಲ್ಲ. ಹಾಗಾದರೆ ಇಂಗ್ಲಿಷ್ ಕಲಿಕೆಗೆ ಏಕಿಷ್ಟು ಒತ್ತಾಸೆ. ಇದರಲ್ಲಿ ಯಾವ ಮಾನವೀಯತೆಯ ಭಾವನೆಯಾಗಲೀ, ಮೌಲ್ಯಗಳಾಗಲೀ, ಚಿಂತನೆಯಾಗಲೀ ಇಲ್ಲ. ಇಲ್ಲಿ ಪ್ರಮುಖವಾಗಿ ಕೆಲಸ ಮಾಡುತ್ತಿರುವುದು ಶ್ರೀಮಂತರಾಗಬೇಕೆಂಬ ಬಯಕೆ. ಇಂಗ್ಲಿಷ್ ಕಲಿತರೆ ಭಾರತೀಯ ರೂಪಾಯಿಯ ಬದಲಾಗಿ ಅಮೆರಿಕದ ಡಾಲರ್, ಇಂಗ್ಲೆಂಡಿನ ಪೌಂಡ್, ಯೂರೋಪಿನ ಯೂರೋ ಪಡೆಯಬಹುದೆಂಬ ಮಹತ್ವಾಕಾಂಕ್ಷೆ. ಇನ್ನೂರು ವರ್ಷಗಳ ವಿದೇಶಿ ಆಳ್ವಿಕೆಯ ಕಾರಣದಿಂದಾಗಿ ದೇಶದಲ್ಲಿ ಉಂಟಾದ ಅತಿ ಬಡತನ ಇದಕ್ಕೆ ಕಾರಣವಾಗಿರಬಹುದು. ದಿಢೀರನೆ ಶ್ರೀಮಂತರಾಗುವ ಸಾಧ್ಯತೆಯನ್ನು ಇಂಗ್ಲಿಷ್ ಭಾಷೆಯಲ್ಲಿ ಜನಸಾಮಾನ್ಯರು ಕಾಣುತ್ತಿರಬಹುದು. ಅಂದರೆ ಜನಸಾಮಾನ್ಯರು ಇಂದಿನ ಜಾಗತೀಕರಣದ ಪರಿಸ್ಥಿತಿಯಲ್ಲಿ ಭಾಷೆಗೂ, ಹಣಕ್ಕೂ ತಳುಕು ಹಾಕುತ್ತಿದ್ದಾರೆಂಬ ಅಂಶ ಸ್ಪಷ್ಟವಾಗಿ ಅನುಭವಕ್ಕೆ ಬರುತ್ತಿದೆ. ಅಲ್ಲದೆ ಶರವೇಗದಲ್ಲಿ ಬೆಳೆಯುತ್ತಿರುವ ವಿಜ್ಞಾನ-ತಂತ್ರಜ್ಞಾನಗಳಿಗೆ ಸಮನಾದ ವೇಗದಲ್ಲಿ ಕನ್ನಡ ಬೆಳೆಯುತ್ತಿಲ್ಲ. ಆದ್ದರಿಂದ ಕೇವಲ ಕನ್ನಡಕ್ಕೆ ಅಂಟಿಕೊಂಡವರು

ಕೋಡಂಗಿಗಳಾಗುತ್ತಾರೆಂಬ ಕೀಳರಿಮೆ ಜನಸಾಮಾನ್ಯರನ್ನೂ, ಮಹತ್ವಾಕಾಂಕ್ಷೆ ಮತ್ತು ಸಾಹಸೀ ಯುವಕರನ್ನೂ ಕಾಡುತ್ತಿದೆ. ಇಂಥದೇ ಚಿತ್ತವೃತ್ತಿ ತಂದೆ-ತಾಯಿಗಳದೂ, ಪಾಲಕರದೂ ಪೋಷಕರದೂ ಆಗಿರುವುದರಿಂದ ಮಕ್ಕಳಲ್ಲಿಯ ಇಂಗ್ಲಿಷ್ ವ್ಯಾಮೋಹಕ್ಕೆ ಪ್ರೋತ್ಸಾಹ ದೊರೆತಂತಾಗುತ್ತಿದೆ. ಮಕ್ಕಳ ಹಾಗೂ ಹಿರಿಯರ ಈ ಇಂಗ್ಲಿಷ್ ವ್ಯಾಮೋಹದ ಲಾಭವನ್ನು ಸಹಜವಾಗಿಯೇ ಖಾಸಗೀ ಕ್ಷೇತ್ರದಲ್ಲಿರುವ ಶಿಕ್ಷಣ ಸಂಸ್ಥೆಗಳು ಪಡೆಯುತ್ತಿವೆ. ಈ ಸಂಸ್ಥೆಗಳು ಇಂಗ್ಲಿಷ್ ಶಿಕ್ಷಣದ ಹೆಸರಿನಲ್ಲಿ ಮಕ್ಕಳನ್ನೂ, ಪಾಲಕರನ್ನೂ ಸಂಸ್ಕೃತಿ ವಿಹೀನರನ್ನಾಗಿ ಮಾಡುತ್ತವೆಂಬುದೂ, ಸಜೀವ ಭಾಷೆಯೊಂದನ್ನು ಜೀವಸಹಿತವಾಗಿ ಸುಡುತ್ತಿವೆ ಎಂಬುದೂ ಹಣದ ದುಂಬಾಲು ಬಿದ್ದಿರುವ ಆ ಸಂಸ್ಥೆಗಳ ಆಡಳಿತ ಮಂಡಳಿಯವರಿಗೆ ಅನಿಸುತ್ತಲೇಯಿಲ್ಲ. ರಷಿಯಾ, ಜಪಾನ್, ಫ್ರಾನ್ಸ್ ಮುಂತಾದ ಮುಂದುವರಿದ ದೇಶಗಳು ಇಂಗ್ಲಿಷ್ ಭಾಷೆಗೆ ಪ್ರಾಮುಖ್ಯತೆ ಕೊಡುವ ಬದಲಾಗಿ ತಮ್ಮ ತಮ್ಮ ದೇಶಗಳ ಭಾಷೆಗಳಿಗೆ ಪ್ರಾಮುಖ್ಯತೆ ಕೊಡುತ್ತಿರುವಾಗ ನಮ್ಮ ದೇಶದಲ್ಲಿ ಅಧಿಕೃತ ೨೫ ಪ್ರಾದೇಶಿಕ ಭಾಷೆಗಳೆಲ್ಲವನ್ನು ಕಸದಂತೆ ಗುಡಿಸಿ ತೊಟ್ಟಿಗೆ ಹಾಕಿ, ಇಂಗ್ಲಿಷನ್ನು ವಿಜೃಂಭಿಸುವ ವ್ಯವಸ್ಥಿತ ಪ್ರಯತ್ನ ನಡೆಯುತ್ತಿರುವುದು ಎಂಥ ದುರಂತ, ಎಂಥ ಕೇಡುಗಾಲ, ಎಂಥ ಅವನತಿ! ಸತ್ತು ಹೋಗಿದ್ದ ಭಾಷೆಯನ್ನು ಎತ್ತಿದ ಪ್ರಯತ್ನವನ್ನು ಇತ್ತೀಚೆಗಿನ ಶತಮಾನಗಳಲ್ಲಿ ನಡೆದುದ್ದನ್ನು ಕನ್ನಡ ಸೋತಿದೆ ಎಂಬುವವರು ನೋಡಬಾರದೆ? ಕನ್ನಡದಷ್ಟೇ ಎರಡು ಸಾವಿರ ವರ್ಷಗಳಷ್ಟು ಹಳೆಯದಾದ ಇಸ್ರೇಲಿನ ಹಿಬ್ರೂ ಭಾಷೆ ಸತ್ತುಹೋಗಿತ್ತು. ಆದರೆ ಇಂದು ಆಧುನಿಕ ಭಾಷೆಯಾಗಿ ಬೆಳೆದು ನಿಂತು ಇಸ್ರೇಲಿಗಳು ಇತ್ತೀಚಿನ ವರ್ಷಗಳಲ್ಲಿ ಅನುಭವಿಸುತ್ತಿರುವ ಕ್ಲಿಷ್ಟಕರ ರಾಜಕೀಯ ಬಿಕ್ಕಟ್ಟನ್ನು ಎದುರಿಸಲು ಅಗತ್ಯವಾದ ಎಲ್ಲ ಜೀವ ಸತ್ವಗಳನ್ನು ಪೂರೈಸುತ್ತಿದೆ. ಮರಳುಗಾಡಿನಲ್ಲಿ ಹಸಿರು ಹಬ್ಬುವಂತೆ ಮಾಡಿದೆ. ಇಸ್ರೇಲಿಗಳಿಗೆ ಬಂದಿರುವ ರಾಜಕೀಯ ಬಿಕ್ಕಟ್ಟು ಕರ್ನಾಟಕಕ್ಕೆ ಬಂದಿಲ್ಲದಿರುವಾಗ ಕನ್ನಡಕ್ಕೆ ತ್ರಾಣ ತರುವ ಕೆಲಸವನ್ನು ಕರ್ನಾಟಕಸ್ಥರು ಏಕೆ ಮಾಡುತ್ತಿಲ್ಲ?

೧೮೩೫ರಲ್ಲಿ ಥಾಮಸ್ ಮೆಕಾಲೆ ಇಂಗ್ಲಿಷ್ ಭಾಷೆಯನ್ನು ಜಾರಿಗೆ ತಂದಾಗ ಅವನಿಗೆ ಭಾರತದ ಮೂಲ ಸ್ರೋತಗಳನ್ನು ಕಾಪಾಡಬೇಕೆಂಬ ಭಾವನೆಯಿರಲಿಲ್ಲ. ಅವನಿಗೆ ಭಾರತದ ಜನಪದದಲ್ಲಿ ಕಂಡಿದ್ದೆಲ್ಲವೂ ಅನಾಗರೀಕತನ ಇಲ್ಲವೆ ಮೂಢತನ. ಇಂಥ ಭಾರತೀಯರ ಉದ್ಧಾರವನ್ನು ಮಾಡುವ ಭಾಷೆಯನ್ನಾಗಿ ಇಂಗ್ಲಿಷನ್ನು ಭಾರತದಲ್ಲಿ ಮೆಕಾಲೆ ಪ್ರಚಾರ ಮಾಡಿದ. ಇಂದಿಗೂ ಒಂದೂವರೆ ಶತಮಾನದ ನಂತರವೂ ಇಂಗ್ಲೀಷನ್ನು ಭಾರತೀಯರ ಉದ್ಧಾರಕ್ಕಾಗಿಯೇ ಇಂಗ್ಲಿಷ್ ಇರುವುದು ಎಂಬ ವಿಚಾರ ಭಾರತೀಯರ ಮನಸ್ಸಿನಲ್ಲಿ ಬೇರೂರುತ್ತಿರುವುದು

ಹೇಡಿತನದ, ಷಂಡತನದ, ಮೌಢ್ಯದ ಪರಾಕಾಷ್ಠತೆಯಾಗಿದೆ. ಯಾವ ಯಾವ ಗುಣವಿಶೇಷತೆಗಳ ಕಾರಣದಿಂದಾಗಿ ಇಂದು ಇಂಗ್ಲಿಷಿಗೆ ಮಣೆ ಹಾಕಲಾಗುತ್ತಿದೆಯೋ ಆ ಎಲ್ಲಾ ಗುಣ ವಿಶೇಷತೆಗಳನ್ನು ಕರ್ನಾಟಕದಲ್ಲಿರುವ ಸಮಸ್ತರೂ ಕನ್ನಡ ಭಾಷೆಗೆ ತಂದುಕೊಡುವ ಪ್ರಯತ್ನ ಮಾಡಬೇಕು. ಅದು ಬಿಟ್ಟು ನಮ್ಮ ಸ್ವಧರ್ಮ, ಸಂಸ್ಕೃತಿ, ಅರ್ಥವ್ಯವಸ್ಥೆ ಇತ್ಯಾದಿಗಳನ್ನು ಉಚ್ಛಾಟನೆ ಮಾಡುವ ಪರ ಭಾಷೆಗೆ ಮೋಹಿತರಾಗುವುದು ಅನೈತಿಕತೆಯೇ ಸರಿ. ಗೀತೆಯಲ್ಲಿ ಹೇಳಿದ ಹಾಗೆ ಸ್ವಧರ್ಮೋ ನಿಧನಂ ಶ್ರೇಯಃ, ಪರಧರ್ಮೋ ಭಯಾವಹಃ, ನನ್ನ ತಾಯಿ ಕುರೂಪಿಯೇ ಇರಲಿ ದುರ್ಬಲಳೇ ಇರಲಿ ಅವಳು ಎಂದೆಂದಿಗೂ ನನ್ನ ತಾಯಿಯೇ. ಪರಸ್ತ್ರೀ ಎಷ್ಟೇ ಚಲುವೆಯಾಗಿರಲಿ ಅವಳು ಎಂದಿಗೂ ನನ್ನ ತಾಯಿ ಆಗಲಾರಳು. ಹೆತ್ತ ತಾಯಿಯ ಪ್ರೀತಿಯನ್ನು ಸಂಪಾದಿಸಬೇಕೇ ಹೊರತು, ನಿಂದಿಸಿ ಪ್ರಯೋಜನವಿಲ್ಲ, ಹಾಗೆಯೇ ಕನ್ನಡ. ಇಂದು ಇಂಗ್ಲಿಷ್ ನಮ್ಮನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತೇನೆಂದು ಹೇಳಿದರೂ, ಕನ್ನಡದ ಬೆಚ್ಚನೆಯ ಅಪ್ಪುಗೆಯಲ್ಲಿ ಆ ಸ್ವರ್ಗದ ಹೊಳಪು ತುಚ್ಛವೇ.

ಇಂಗ್ಲಿಷ್ ಅಂತರಾಷ್ಟ್ರೀಯ ಭಾಷೆಯಾದರೆ ಕನ್ನಡವೂ ಸೇರಿದಂತೆ ಉಳಿದೆಲ್ಲಾ ಭಾರತೀಯ ಭಾಷೆಗಳು ಅಂತರ್ದೇಶೀಯ ಭಾಷೆಗಳಾಗಬೇಕು. ಇಂಗ್ಲಿಷ್ ಅಂತರಾಷ್ಟ್ರೀಯ ಮಟ್ಟದಲ್ಲಿ ವೈಜ್ಞಾನಿಕ, ತಾಂತ್ರಿಕ ಭಾಷೆಯಾಗಿದ್ದರೆ ಕನ್ನಡ ವೈಜ್ಞಾನಿಕತೆಗೆ ಮತ್ತು ತಾಂತ್ರಿಕತೆಗೆ ಪ್ರಾದೇಶಿಕ ದೃಷ್ಟಿಕೋನವನ್ನು ತಂದುಕೊಡುವುದರ ಮೂಲಕ ಸ್ಥಳೀಯರ ಕ್ರಿಯಾಶೀಲತೆಯ ಕಾರಣದಿಂದ ಯುಕ್ತ ತಂತ್ರಜ್ಞಾನ ಹೊರ ಹೊಮ್ಮುವಂತೆ ಆಗಬೇಕು. ಆಗ ಗಾಂಧೀಜಿಯವರು ಹೇಳಿದ್ದ ಮಾತು, "ನನಗೆ ಲೋಕ ಗಾತ್ರದ ಉತ್ಪಾದನೆ ಬೇಕಿಲ್ಲ. ಲೋಕದವರಿಂದ ಉತ್ಪಾದನೆ ಬೇಕು" ಎಂಬುದು ಸಾಕಾರಗೊಳ್ಳಲು ಸಾಧ್ಯವಾಗುತ್ತದೆ. ಅಲ್ಲದೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳೇ ಇಂಗ್ಲೀಷನ್ನು ಬಯಸುತ್ತಿರುವಾಗ "ನಾವೇನು ಮಾಡಲು ಸಾಧ್ಯ" ಎಂಬುದಾಗಿ ಹೊಣಗೇಡಿತನದಿಂದ ರಾಜಕರಣಿಗಳು ಹೇಳುವಮಾತನ್ನು ಬಹಳಷ್ಟು ನಿರಸನಗೊಳಿಸಿ, ಆ ಮಾತಿನ ಸ್ಥಾನದಲ್ಲಿ, "ಜನತೆ ಕನ್ನಡವನ್ನು ಬಯಸುತ್ತಿರುವಾಗ ಇಂಗ್ಲಿಷ್ ಮಾಧ್ಯಮದ ಶಾಲೆಗಳ ಸ್ಥಾಪನೆಗೆ ನಾವೆಂತು ಪ್ರೋತ್ಸಾಹಿಸುವುದು" ಎಂಬುದಾಗಿ ಹೇಳುವಂತಾಗುತ್ತದೆ. ಆಗ ಕನ್ನಡವೂ ಬೆಳೆಯುತ್ತದೆ, ವಿಜ್ಞಾನವೂ ಬೆಳೆಯುತ್ತದೆ, ತಂತ್ರಜ್ಞಾನವೂ ಬೆಳೆಯುತ್ತದೆ. ಈಗಿನಂತೆ ವಿಜ್ಞಾನ ಮತ್ತು ತಂತ್ರಜ್ಞಾನಗಳು ಇಂಗ್ಲಿಷ್ ಭಾಷೆಯ ಕಾರಣದಿಂದಾಗಿ ಜನಸಾಮನ್ಯರ ದೃಷ್ಟಿ ಮತ್ತು ಸಾಮರ್ಥ್ಯಗಳಿಂದ ಮರೆಯಾಗಿರುವುದಿಲ್ಲ. ಆಗ ಅವೆರಡೂ ಸಮಾಜಮುಖಿಯಾಗುವುದರಿಂದ ಸ್ಥಳೀಯವಾಗಿಯೇ ಉದ್ಯೋಗಗಳ

ಸೃಷ್ಟಿಯಾಗುತ್ತದೆ. ಆಗ ಇಂಗ್ಲಿಷ್ ಭಾಷೆಯ ಮೊರೆಹೋಗದೆ ಕನ್ನಡ ಭಾಷೆಯ ಜ್ಞಾನದಿಂದಲೇ ಜೀವನ ನಿರ್ವಹಣೆ ಮಾಡಬಹುದು.

ಜಾಗತೀಕರಣದ ಕಲ್ಪನೆ ಗ್ರಾಮೀಕರಣದಲ್ಲಿ ಸಾಕಾರಗೊಳ್ಳಬೇಕು. ಕ್ರಿಯೆ ಗ್ರಾಮದಲ್ಲಿರುತ್ತಾ, ಚಿಂತನೆ ವಿಶ್ವ ವ್ಯಾಪಕವಾಗಿರುವಂತೆ ಜೀವನಶೈಲಿ ಗ್ರಾಮಗ್ರಾಮಗಳಲ್ಲಿ ರೂಪಗೊಳ್ಳಬೇಕು. ಹೀಗೆ ಮಾಡುವುದರಿಂದ ಕನ್ನಡವನ್ನು ಇಂಗ್ಲಿಷ್ ಭಾಷೆಗೆ ಮುಖಾಮುಖಿಯಾಗಿ ನಿಲ್ಲಿಸಬಹುದು.

ಕನ್ನಡವನ್ನು ಸಶಕ್ತಗೊಳಿಸುವ ನಿಟ್ಟಿನಲ್ಲಿ ಸರ್ಕಾರದ ಪಾತ್ರ ಹಿರಿದಾಗಿದೆ, ಜವಾಬ್ದಾರಿಯುತವಾದದ್ದಾಗಿದೆ. ಕರ್ನಾಟಕದಲ್ಲಿರುವ ಎಲ್ಲಾ ಬಗೆಯ ಸಂಶೋಧನಾ ಸಂಸ್ಥೆಗಳಲ್ಲಿ ಹೆಚ್ಚು ಹೆಚ್ಚು ಕನ್ನಡ ಪಾರಿಭಾಷಿಕ ಶಬ್ದಗಳನ್ನು ಸೃಷ್ಟಿಸಿ ಉಪಯೋಗಿಸುವಂತೆ ಕ್ರಮ ಕೈಗೊಳ್ಳಬೇಕು. ರಾಜ್ಯದಲ್ಲಿರುವ ತಾಂತ್ರಿಕ ಶಾಲೆ ಕಾಲೇಜುಗಳಲ್ಲಿ ವೈದ್ಯಕೀಯ ಕಾಲೇಜುಗಳಲ್ಲಿ ಕನ್ನಡದ ಮೂಲಕ ಅಧ್ಯಯನ ಮಾಡಲು ಮುಂದೆ ಬರುವ ವಿದ್ಯಾರ್ಥಿಗಳಿಗೆ ಹಾಗೂ ಕನ್ನಡದಲ್ಲಿ ಕಲಿಸಲು ಸಿದ್ಧವಾಗುವ ಅಧ್ಯಾಪಕರಿಗೆ ಸರ್ಕಾರ ಧನ ಸಹಾಯದ ನೆರವಿನೊಂದಿಗೆ ಇತರ ಎಲ್ಲಾ ಬಗೆಯ ಪ್ರೋತ್ಸಾಹವನ್ನು ಕೊಡಬೇಕು. ಅಂತಹವರನ್ನು ಸನ್ಮಾನಿಸಬೇಕು, ಹಾಗೂ ಕನ್ನಡ ಮಾಧ್ಯಮದಲ್ಲಿ ತಾಂತ್ರಿಕ ವಿಷಯವಾಗಿ ಅಧ್ಯಯನ ಮಾಡಿದ ಯುವಕರಿಗೆ ಕರ್ನಾಟಕದಲ್ಲಿರುವ ಎಲ್ಲಾ ಬಗೆಯ ಕೈಗಾರಿಕೆಗಳಲ್ಲಿ ಆಧ್ಯತೆಯ ಮೇರೆಗೆ ಉದ್ಯೋಗ ಕೊಡುವಂತೆ ಉದ್ಯಮಪತಿಗಳ ಮನ ಒಲಿಸಬೇಕು. ಈಗ ಎಲ್ಲಡೆ ತಲೆ ಎತ್ತುತ್ತಿರುವ ವಿಶೇಷ ಆರ್ಥಿಕ ವಲಯಗಳಲ್ಲಿ ಸ್ಥಾಪಿತಗೊಳ್ಳುವ ಕೈಗಾರಿಕೆಗಳಲ್ಲಿಯೂ ಈ ಪ್ರಯತ್ನ ಬಿರುಸಾಗಿ ನಡೆಯಬೇಕು. ವಿಶೇಷ ಆರ್ಥಿಕ ವಲಯಗಳಲ್ಲಿ ಸ್ಥಾಪಿತಗೊಳ್ಳುವ ಕೈಗಾರಿಕೆಗಳು ರಾಜ್ಯದ ಭೂಮಿಯನ್ನು, ನೀರನ್ನೂ,ವಿದ್ಯುತ್ತನ್ನೂ ತೆರಿಗೆ ರಿಯಾಯಿತಿಯುನ್ನೂ ಧಾರಾಳವಗಿ ಪಡೆಯುವುದರಿಂದ ಕನ್ನಡದಲ್ಲಿ ತಾಂತ್ರಿಕತೆಯ ಜ್ಞಾನ ಪಡೆದವರಿಗೆ ಉದ್ಯೋಗ ಕೊಡುವುದು ಆ ಕೈಗಾರಿಕೋದ್ಯಮಿಗಳ ಹಾಗೂ ಸರ್ಕಾರದ ನೈತಿಕ ಹಾಗೂ ರಾಜಕೀಯ ಜವಾಬ್ದಾರಿಯಾಗಿರುತ್ತದೆ ಹಾಗೂ ಸ್ಥಳೀಯರ ಹಕ್ಕೊತ್ತಾಯ ಕೂಡ ಆಗಿರುತ್ತದೆ. ಈ ಬಗ್ಗೆ ಎಲ್ಲ ಕ್ಷೇತ್ರಗಳಲ್ಲಿಯ ಕನ್ನಡ ನೇತಾರರು ಕೂಡಲೆ ಜಾಗ್ರತಗೊಂಡು ಕ್ರಿಯಾಶೀಲರಾಗಬೇಕು.

ಸ್ವಾತಂತ್ರ್ಯ ಬಂದ ಮೇಲೆ ೧೯೬೪ ರಲ್ಲಿ ದೇಶದ ಶಿಕ್ಷಣದಲ್ಲಿ–ಬಾಲವಾಡಿಯಿಂದ ವಿಶ್ವವಿದ್ಯಾನಿಲಯುದ ಶಿಕ್ಷಣವರೆಗಿನ ಶಿಕ್ಷಣದಲ್ಲಿ ಸುಧಾರಣೆಯನ್ನು ತರುವ ಉದ್ದೇಶದಿಂದ ಕೇಂದ್ರಸರ್ಕಾರ ಡಾ. ಡಿ.ಎಸ್.ಕೋಠಾರಿ ಆಯೋಗವನ್ನು ನೇಮಿಸಿತು. ಆ ಆಯೋಗದ ಕೆಲವು ಶಿಫಾರಸ್ಸುಗಳು ಜಾರಿಗೆ ಬಂದವು, ಇನ್ನೂ ಕೆಲವು ಬರಲಿಲ್ಲ, ಆದರೆ ಆ ಆಯೋಗದ ಗಂಭೀರ

ಅಧ್ಯಯನವನ್ನು ಯಾರೂ ತಳ್ಳಿಹಾಕುವಂತಿಲ್ಲ. ಆನಂತರ ಇದು ವರಿವಿಗೂ ಅಂಥ ಸಮಗ್ರ ಶೈಕ್ಷಣಿಕ ಸುಧಾರಣೆ ಆಯೋಗ ಸ್ಥಾಪಿತಗೊಂಡಿಲ್ಲ. ಕೋಠಾರಿ ಆಯೋಗವೂ ಕೂಡ ಪ್ರಾದೇಶಿಕ ಭಾಷೆಗಳ ಸರ್ವಾಂಗೀಣ ಬಲವರ್ಧನೆಗಾಗಿ ಒತ್ತುಕೊಟ್ಟಿದೆ. ಈ ಬಲವರ್ಧನೆ ಪ್ರಾದೇಶಿಕ ಭಾಷೆಗಳ ಮೂಲಕ ತಾಂತ್ರಿಕ ಜ್ಞಾನವನ್ನು ಕೊಡುವುದರ ಮೂಲಕ ಆಗಬೇಕೆಂದು ಪ್ರತಿಪಾದಿಸಿದೆ. ಆಯೋಗದ ಶಿಫಾರಸ್ಸುಗಳನ್ನು ಕಪಾಟಿನಿಂದ ಹೊರತೆಗೆದು ಅವುಗಳನ್ನು ಇಂದಿನ ಪರಿಸ್ಥಿತಿಗೆ ಸೂಕ್ತ ಬದಲಾವಣೆಯೊಂದಿಗೆ ಜಾರಿಗೆ ತರಬೇಕಾದುದು ಕೇಂದ್ರ ಸರ್ಕಾರದ ಕರ್ತವ್ಯವಾಗಬೇಕು.

ಇಂಗ್ಲಿಷ್ ಭಾಷಾ ಕಲಿಕೆ ಚಿಕ್ಕ ಮಕ್ಕಳ ವ್ಯಕ್ತಿತ್ವದ ಮೇಲೆ ಎಂಥ ಪೈಶಾಚಿಕ ಪರಿಣಾಮ ಬೀರುತ್ತದೆಂದು ಜಗತ್ತಿನ ಎಲ್ಲಾ ಶಿಕ್ಷಣ ತಜ್ಞರು, ಶ್ರೇಷ್ಠ ಚಿಂತಕರು, ರಾಷ್ಟ್ರನಾಯಕರು, ಸಾಹಿತಿಗಳು, ವಿಜ್ಞಾನಿಗಳಾದಿಯಾಗಿ ಸ್ಪಷ್ಟಮಾತುಗಳಲ್ಲಿ ಹೇಳಿದ್ದಾರೆ. ಆದರೆ ಓಲೈಸುವ ರಾಜಕಾರಣದ ನೀತಿಯಿಂದಾಗಿ ಇಂಗ್ಲಿಷ್‌ಗೆ ಮುಖಾಮುಖಿಯಾಗಿ ಕನ್ನಡದ ಮಾತು ಬಂದಾಗಲೆಲ್ಲ ಜಾತಿ, ಧರ್ಮ, ದಲಿತ, ದಲಿತೇತರ, ಅಲ್ಪಸಂಖ್ಯಾತರು, ಬಹುಸಂಖ್ಯಾತರು ಇತ್ಯಾದಿ ಅಂಶಗಳನ್ನು ವಾದದ ಬಾಣಗಳನ್ನಾಗಿ ಮಾಡಿ ಕನ್ನಡವನ್ನು ಉರುಳಿಸುವ ಪ್ರಯತ್ನ ಮಾಡಲಾಗುತ್ತಿದೆ.

ಪ್ರಜಾತಂತ್ರದಲ್ಲಿ ಬಹುಮತ ಪ್ರಶ್ನಾತೀತ ಅಂಶವಾಗಿದ್ದರೂ, ಮಾನವಿಕ, ಸಾಮಾಜಿಕ, ಸಾಂಸ್ಕೃತಿಕ, ಆತ್ಮಿಕ ವಿಷಯಗಳಲ್ಲಿ ಬಹುಮತದ ಜಾಣ್ಮೆ ಪ್ರಶ್ನಾರ್ಹವೇ. ಸಾಕ್ರಟಿಸ್ ಬಹುಕಾಲದ ಹಿಂದೆಯೇ ಬಹುಮತದ ನಿರ್ಧಾರಗಳಲ್ಲಿ ಗಂಡಾಂತರದ ಬಗ್ಗೆ ಎಚ್ಚರಿಕೆ ಕೊಟ್ಟಿದ್ದ. ಆದರೆ ಅವನಿಗೆ ವಿಧಿಸಲಾಗಿದ್ದ ಮರಣದಂಡನೆ ಬಹುಮತದಿಂದಲೇ! ಕುರುಡು ಮಕ್ಕಳೇ ಹೆಚ್ಚಿದ್ದ ಕುಟುಂಬದಲ್ಲಿ ಒಂದು ಮಗು ಮಾತ್ರ ದೃಷ್ಟಿ ಹೊಂದಿತ್ತು. ಆದರೆ ಅದರಿಂದ ವಿಚಲಿತರಾದ ಕುಟುಂಬದ ಬಹುಸಂಖ್ಯೆಯ ಸದಸ್ಯರು ಆ ಮಗುವಿಗೂ ಶಸ್ತ್ರಕ್ರಿಯೆ ಮಾಡಿಸಿ ಕುರುಡನನ್ನಾಗಿ ಮಾಡಿದರಂತೆ! ಇಂಥ ಸ್ಥಿತಿ ಈಗ ನಮ್ಮ ಕನ್ನಡಕ್ಕೂ ಬಂದಿದೆ. ಮೆಕಾಲೆ ೧೮೩೫ರಲ್ಲಿ ಯಾವೆಲ್ಲಾ ತರ್ಕಗಳಿಂದ ಭಾರತದಲ್ಲಿ ಇಂಗ್ಲಿಷ್‌ನ್ನು ಜಾರಿಗೆ ತಂದನೋ ಅದಕ್ಕೆ ಪ್ರತಿಯಾದ ತರ್ಕಗಳಿಂದ ಕನ್ನಡದ ಮಹತ್ವವನ್ನು ಪ್ರತಿಪಾದಿಸಿದ ರಾಷ್ಟ್ರಕವಿ ಮತ್ತು ಪ್ರಾತಃಸ್ಮರಣೀಯ ಆತ್ಮವಾದ ಕುವೆಂಪುರವರ ಈ ಪ್ರಾರ್ಥನೆ ಕರ್ನಾಟಕಸ್ಥರ ಕಿವಿಯಲ್ಲಿ ಮೊಳಗಲಿ, ತನ್ಮೂಲಕ ಭಾರತೀಯರೆಲ್ಲರ ಕಿವಿಯಲ್ಲಿ ಮೊಳಗಲಿ.

ಬೇಡ, ಬೇಡ, ಭೇಡ!
ಮಕ್ಕಳ ಈ ಕೊಲೆ ಬೇಡ!
ತುಸು ಯೋಚಿಸೋ ಹೇ ವಿದ್ವನ್ಮೂಢ!
ತಪ್ಪಿಸೋ ಈ ಇಂಗ್ಲೀಷಿನ ಕೇಡ!

* * *

ವೇದಾರ್ಥ - ಪ್ರಕ್ರಿಯೆ

–ವಿನೋಬಾ

ವೇದದಲ್ಲಿ ಬರುವ ಶಬ್ದಗಳು ಅರ್ಥಘನವಾಗಿರುತ್ತವೆ. ಅಂದರೆ ವೇದದ ಶಬ್ದದಲ್ಲಿ ಬಹು ಅರ್ಥ ತುಂಬಿರುತ್ತದೆ. ಪ್ರತಿಯೊಬ್ಬರೂ ಆ ಶಬ್ದಕ್ಕೆ ತಮ್ಮದೇ ಆದ ಅರ್ಥ ಮಾಡಿಕೊಳ್ಳಬಹುದು. ನ ಹೀ **ವಚನಸ್ಯ ಅರ್ಥ ಭಾರೋ ನಾಮ ಕಶ್ಚಿತ್** - ವಚನದ ಮೇಲೆ ಅರ್ಥದ ಭಾರವಿರುವುದಿಲ್ಲ. ಆ ಭಾರವನ್ನು ತಡೆದುಕೊಳ್ಳುವ ಶಕ್ತಿ ವಚನಕ್ಕಿದೆ. ಆದ್ದರಿಂದ ಒಂದು ಪ್ರಕ್ರಿಯೆಯಿಂದ ವಚನದ ಒಂದು ಅರ್ಥ ಹೊರಟರೆ ಇನ್ನೊಂದು ಪ್ರಕ್ರಿಯೆಯಿಂದ ಎರಡನೆ ಅರ್ಥ ಕೂಡ ಬರಬಹುದು. ಅವೆರಡರಲ್ಲಿ ವಿರೋಧಕ್ಕೆ ಯಾವ ಕಾರಣವೂ ಇಲ್ಲ. ಉದಾಹರಣೆಗಾಗಿ, ಲೋಕಮಾನ್ಯ ತಿಲಕರು ವೇದದ ಕೆಲವು ಮಂತ್ರಗಳನ್ನು ತೆಗೆದುಕೊಂಡು ಆರ್ಯರ ನಿವಾಸವು ಉತ್ತರ ಧ್ರುವದ ಮೇಲಿತ್ತೆಂದು ಅರ್ಥ ಮಾಡಿದರು. ಈ ಕಲ್ಪನೆಯೇನೋ ಬಹು ರಮಣೀಯ. ಈ ಮಾತಿಗೆ ಆಧುನಿಕ ವಿಜ್ಞಾನದ ಆಧಾರವೂ ದೊರೆಯುತ್ತದೆ. ಆದರೆ ಅದೇ ಮಂತ್ರಗಳಿಂದ ಎರಡನೆ ಅರ್ಥ ಕೂಡ ಬರಲು ಸಾಧ್ಯವಿದೆ. ಉದಾಹರಣೆಗೆ **ಊರ್ವಶ್ಯಾಮ ಭಯಂ ಜ್ಯೋತಿರಿಂದ್ರ ಮಾ ನೋ ದೀರ್ಘಾ ಅಭಿ ನಶ್ಯಂತ ಮಿಶ್ರಾಃ** (೨.೫.೩) – ಅತ್ಯಂತ ವ್ಯಾಪಕವಾದ ಜ್ಯೋತಿ ನನಗೆ ಪ್ರಾಪ್ತವಾಗಲಿ ದೀರ್ಘ ತಮಿಸ್ರಾ ನನ್ನ ಮೇಲೆ ಆಕ್ರಮಣ ಮಾಡದಿರಲಿ ಈ ಮಂತ್ರದ ಒಂದು ಅರ್ಥ, ನಮಗೆ ಪರಮಾಪ್ತ ಜ್ಯೋತಿ ಪ್ರಾಪ್ತವಾಗಲಿ. ಯಾವ ರೀತಿ ದೀರ್ಘತಮಸ್ ಋಷಿಗೆ ದೀರ್ಘ ಅಂಧಕಾರದಿಂದ ಹೋಗಬೇಕಾಗಿ ಬಂತೋ ಅಂಥ ಅನುಭವ ನಮಗೆ ಆಗದಿರಲಿ. ನಾವು ಅಂಥ ದೀರ್ಘ ತಮಿಸ್ರಾಗಳಿಂದ ಮತ್ತು ಅಜ್ಞಾನಾದಿಗಳಿಂದ ರಕ್ಷಿಸಿಕೊಳ್ಳುವ ಪ್ರಯತ್ನ ಮಾಡೋಣ. ಈ ವಾಕ್ಯವು ನಮಗೆ ಅತ್ಯಂತ ಸುಂದರವಾದ ಆಧ್ಯಾತ್ಮಿಕ ಅರ್ಥವನ್ನು ಕೊಡುತ್ತದೆ ಆದರೆ ಉತ್ತರ ಧ್ರುವದ ದೃಷ್ಟಿಯಿಂದ ನೋಡಿದಾಗ "ಅಲ್ಲಿಯ ದೀರ್ಘ ರಾತ್ರಿಯು ನಮಗೆ ಕಷ್ಟ ಕೊಡದಿರಲಿ"–ಎಂಬ ಅರ್ಥವು ಬರಲು ಸಾಧ್ಯವಿದೆ. ಉತ್ತರ ಧ್ರುವದ ಮೇಲೆ ೬ ತಿಂಗಳು ಭಯಾನಕವಾದ ಅಂಧಕಾರವುಳ್ಳ ರಾತ್ರಿ ಇರುತ್ತದೆ, ಬಹಳ ಚಳಿ ಇರುತ್ತದೆ ಅಗ್ನಿ ಉರಿಸುವುದು ಕಷ್ಟವಾಗಿ ಬಿಡುತ್ತದೆ. ಜೀವನ ಕಷ್ಟವಾಗುತ್ತದೆ. ಆದ್ದರಿಂದ ವ್ಯಾಕುಲಗೊಂಡ ಋಷಿಯು ಈ ಪ್ರಕಾರದ ದೀರ್ಘರಾತ್ರಿಯಿಂದ ತನ್ನನ್ನು ಮುಕ್ತಮಾಡೆಂಬುದಾಗಿ ಪ್ರಾರ್ಥಿಸುತ್ತಾನೆ, ಈ ಶ್ಲೋಕದ ಅರ್ಥವನ್ನು ಯಾರಾದರೂ ಹೀಗೆ ಮಾಡುವುದಾದರೆ ಹಾಗೆ ಅರ್ಥಮಾಡುವ ಪೂರ್ಣ ಅಧಿಕಾರ ಆತನಿಗಿದೆ. ಏಕೆಂದರೆ ವೇದ

ಕಾಮಧೇನು. ಯಾರಿಗೆ ಏನಿಷ್ಟವೋ ಅದನ್ನು ಅವರು ಪಡೆದುಕೊಳ್ಳಬಹುದು. ಆ ವೇದಮಾತೆ ನಾವೇನು ಇಷ್ಟಪಡುತ್ತೇವೆಯೋ ಅದನ್ನು ಕೊಡುತ್ತಿದ್ದಾಳೆ. ಹಾಗಿದ್ದ ಮೇಲೆ ವೇದವನ್ನು ಕೇಳುವವನಿಗೆ ನೀನು, ಈ ರೀತಿ ಕೇಳ ಕೂಡದೆಂದು ಪ್ರಶ್ನಿಸುವುದಕ್ಕೆ ನಾನು ಯಾರು ? ಅಂಥ ನಿಷ್ಠುರಿ ನಾನ್ಯಾರು ? ನೀನು ಅವನಿಗೆ ಇದನ್ನು ಕೊಡಬೇಡವೆಂದು ವೇದ ಮಾತೆಗೆ ಹೇಳುವುದಕ್ಕೆ ನಾನ್ಯಾರು ? ಆದರೆ ಉರೂ ಜ್ಯೋತಿ (ವ್ಯಾಪಕವಾದ ಜ್ಯೋತಿ) ಎಂದು ಹೇಳುವುದರಲ್ಲಿ ಒಂದು ಅತ್ಯಂತ ಪಾರಮಾರ್ಥಿಕ ಅರ್ಥಹೊರಡುತ್ತದೆ.

ಸಾಯಣಾಚಾರ್ಯರು ಯಜ್ಞಪರಂಪರೆಯನ್ನು ನೋಡಿ ವೇದವನ್ನು ಕರ್ಮಕಾಂಡದ ಪರವಾಗಿ ಅರ್ಥಮಾಡಿದ್ದಾರೆ. ವೇದಾರ್ಥದ ಪ್ರಕ್ರಿಯೆ ಕೇವಲ ಯಜ್ಞ ಪ್ರಕ್ರಿಯೆಯಲ್ಲವೆಂಬುದನ್ನು ಸಾಯಣಾಚಾರ್ಯರು ತಿಳಿದಿದ್ದರೂ, ಅಲ್ಲಲ್ಲಿ ಮತ್ತು ಆಗಾಗ್ಗೆ ಎರಡನೆಯ ಪ್ರಕ್ರಿಯೆಯಿಂದ ಅರ್ಥ ಮಾಡಿದ್ದಾರೆ. ವೇದದಲ್ಲಿ ಒಂದು ಕಡೆ ಹೀಗೆ ಬರುತ್ತದೆ. **ಚತ್ವಾರಿ ಶೃಂಗ ತ್ರಯೋ ಅಸ್ಯ ಪಾದಾಃ** (೪.೫.೨) – ನಾಲ್ಕು ಕೊಂಬಿನ, ಮೂರು ಕಾಲಿನ ಒಂದು ವಿಲಕ್ಷಣ ಎತ್ತು ಇದೆ. ಪತಂಜಲಿಯವರು ತಮ್ಮ ಮಹಾಭಾಷ್ಯದಲ್ಲಿ ವ್ಯಾಕರಣದ ಆಧಾರದ ಮೇಲೆ ಇದರ ಅರ್ಥವನ್ನು ಹೀಗೆ ಮಾಡಿದ್ದಾರೆ. ಒಂದು ವೇಳೆ ಪತಂಜಲಿಯವರಿಗೆ ವ್ಯಾಕರಣಾಧಾರಿತವಾಗಿ ಅರ್ಥ ಮಾಡುವ ಅಧಿಕಾರವಿರುವುದಾದರೆ ಬೇರೆಯವರಿಗೂ ಕೂಡ ಬೇರೆ ಪ್ರಕಾರದಿಂದ ಅರ್ಥಮಾಡುವ ಅಧಿಕಾರವಿದೆ. ಒಂದು ವೇಳೆ ಯಾರಾದರು ಐತಿಹಾಸಿಕ ದೃಷ್ಟಿಯನ್ನಿಟ್ಟುಕೊಂಡು, ಪ್ರಾಚೀನ ಕಾಲದಲ್ಲಿ ವೇದ ಪ್ರಕಟವಾದಾಗ ಋಷಿಗಳಿಗೆ ಸಮಾಜ ಜೀವನದ ಜ್ಞಾನ ಇಂದಿನದಕ್ಕಿಂತ ಕಡಿಮೆ ಇತ್ತು. ಆದ್ದರಿಂದ ವೇದದಲ್ಲಿ ಸಮಾಜ ಕುರಿತಾಗಿ ಬಂದಿರುವ ಚಿತ್ರ ಹಳೆಯ ಸಮಾಜದ ಚಿತ್ರವೆಂದು" ಹೇಳುವುದಾದರೆ ಐತಿಹಾಸಿಕ ದೃಷ್ಟಿಯಿಂದ ಉಚಿತವಾಗಿಯೇ ಇದೆ. ಆದರೆ ಯಾವುದೇ ಪ್ರಯತ್ನ ನಡೆದರೂ ಅದು ಪೂರ್ತಾ ನಡೆಯಬೇಕು. ಭಿನ್ನ ಭಿನ್ನ ಪ್ರಕ್ರಿಯೆಗಳ ಅನುಸಾರದಿಂದಾಗಿ ಭಿನ್ನ ಭಿನ್ನ ಅರ್ಥವನ್ನು ಮಾಡುವುದಾದರೆ ಅದನ್ನು ಉಚಿತವೆಂದು ಹೇಳಲಾಗುವುದು. ಆದರೂ ಕೂಡ ಕೆಲ ಪ್ರಕ್ರಿಯೆಗಳೊಂದಿಗೆ ಕೆಲವು ಮಿತಿಗಳು ಬಂದೇ ಬಿಡುವವು. ಉದಾಹರಣೆಗೆ ಐತಿಹಾಸಿಕ ಪ್ರಕ್ರಿಯೆಯನ್ನಾಧರಿಸಿ ವೇದದ ಅರ್ಥವನ್ನು ಮಾಡಲು ಪ್ರಾರಂಭಿಸಿದಾಗ ಅದರಲ್ಲಿ ಬಹಳಷ್ಟು ಕಲ್ಪನೆಗಳು ನುಸುಳುವವು. ಆಗ ಆ ಇತಿಹಾಸ ಪ್ರಮಾಣಭೂತವಾಗಿರುವುದಿಲ್ಲ. ಪ್ರಯತ್ನವೇನೋ ಪ್ರಾಮಾಣಿಕವಾಗಿಯೆ ಇರುವುದು. ಹೀಗೆ ಒಂದು, ಆಧಿ ದೈವಿಕ ಪ್ರಕ್ರಿಯೆಯಾದರೆ ಎರಡನೆಯದು ಆಧ್ಯಾತ್ಮಿಕ ಪ್ರಕ್ರಿಯೆ. ಅದರಿಂದ ಕೂಡ ವೇದದ ಅರ್ಥವನ್ನು ಮಾಡಬಹುದಾಗಿದೆ.ಹೀಗೆ ಎಲ್ಲ ಪ್ರಕ್ರಿಯೆಗಳಿಗೆ ಇಲ್ಲಿ ಅವಕಾಶವಿದೆಯೆಂದು ಭಾವಿಸಿ ನಾವು ಅರ್ಥಮಾಡಬೇಕು.

ಇತ್ತೀಚಿನ ದಿನಗಳಲ್ಲಿ ತುಲನಾತ್ಮಕ ಭಾಷಾ ಶಾಸ್ತ್ರವು ವಿಕಸಿತಗೊಂಡಿದೆ. ಅದರ ಅನುಭವ ನನಗೆ ಸ್ವಲ್ಪವಿದೆ. ಹಿಂದೂಸ್ಥಾನದ ಎಲ್ಲ ಭಾಷೆಗಳ ಹಾಗೂ ಹಲವು ವಿದೇಶದ ಭಾಷೆಗಳ ಅಧ್ಯಯನ ಮಾಡುವ ಪ್ರಸಂಗ ನನಗೆ ದೊರೆತಿದೆ. ಈ ವಿಷಯದಲ್ಲಿ ಏನೆಲ್ಲ ಪ್ರಯತ್ನಗಳು ನಡೆದಿವೆಯೊ ಅವುಗಳನ್ನು ಉಪೇಕ್ಷಿಸತಕ್ಕದಲ್ಲ. ಅವುಗಳಲ್ಲಿ ಕೇವಲ ಊಹೆ ಮಾತ್ರ ಇರಲು ಸಾಧ್ಯ. ಇದಕ್ಕಿಂತ ಇನ್ನು ಹೆಚ್ಚಿಗೆ ಯಾವ ಪ್ರಮಾಣವನ್ನೂ ಅವರು ಮಾಡಲಾರರು.

ಓರ್ವ ಆರ್ಯಸಮಾಜಿ ಸಹೋದರ ನನ್ನ ಬಳಿ ಬಂದಿದ್ದರು. ವೇದದಲ್ಲಿ ಮಿತ್ರ ಮತ್ತು ವರುಣ ಎಂದು ಬಂದಿರುವ ಮಂತ್ರಗಳಿಗೆ ಆಮ್ಲಜನಕ ಮತ್ತು ಜಲಜನಕ ಎಂಬ ಅರ್ಥವು ಹೊರಡುತ್ತದೆಂಬುದಾಗಿ ಅವರು ಹೇಳಿದರು. **ಮಿತ್ರಂ ಊವೆ ಪೂತ ದಕ್ಷಂ ವರುಣಂ ಚ ರಿಷಾದಶಂ. ಧಿಯಂ ಗೃತಾರ್ಚಿ ಸಾಧಂಥ** (೧.೧.೧೦) – ನಾನು ತಮಾಷೆಗೆ ಹೇಳಿದೆ, "ಸಹೋದರನೆ, ಈ ಮಂತ್ರಗಳಿಲ್ಲದೆಯೆ ನೀರಿನಿಂದ ಆಮ್ಲಜನಕ ಮತ್ತು ಜಲಜನಕ ಪಡೆಯುವುದು ಸುಲಭ. ಈಗ ವಿಜ್ಞಾನವೂ ನಿಮಿಷಾರ್ಧದಲ್ಲಿ ನೀರಿನಿಂದ ಆಮ್ಲಜನಕ ಮತ್ತು ಜಲಜನಕಗಳನ್ನು ಪ್ರತ್ಯೇಕಿಸುತ್ತದೆ. "ಆದರೂ ಕೂಡ ಮಿತ್ರ ಮತ್ತು ವರುಣ ಸೇರಿ ನೀರನ್ನು ಮಾಡುವುದಾದರೆ ಆ ನೀರನ್ನು ಕುಡಿಯುವುದಕ್ಕೆ ನನ್ನ ಅಭ್ಯಂತರವಿಲ್ಲ." ಎಂದು ಹೇಳಿದೆ.

ವೇದದಲ್ಲಿ ಲಿಂಗಗಳು ಕೂಡ ಸಿಗುತ್ತವೆ ಮಧ್ವಾಚಾರ್ಯರ ಅನುಯಾಯಿಗಳು ತಪ್ತ ಮುದ್ರೆಯನ್ನು ಧರಿಸುತ್ತಾರೆ. ಇದಕ್ಕೇನು ಆಧಾರವಿದೆಯೆಂದು ಒಬ್ಬ ಮಿತ್ರನನ್ನು ಕೇಳಿದಾಗ ಅವರು – **ಅತಪ್ತನೂರ್ ನ ತದಾಮೊ ಅಶನುತೆ ಶ್ರುತಾಸ್ ಇದುಹಂತ ಸ್ತತ್ ಸಮಾಶತ** (೯.೪.೧೦) ಈ ಮಂತ್ರವನ್ನು ಹೇಳಿದರು. ಈ ಮಂತ್ರದಿಂದ ಅತಪ್ತ – ತನು ಶಬ್ದವನ್ನು ತೆಗೆದುಕೊಂಡು ಅವರು ತಪ್ತ ಮುದ್ರಧಾರಣ ಮಾಡುತ್ತಾರೆ. ಅವರು ಶ್ರದ್ಧಾವಂತರಾದ ಭಕ್ತಶಿರೋಮಣಿಗಳು. ಆದ್ದರಿಂದ ನಾನು ಅದನ್ನು ನಿಷೇಧಿಸುವುದಿಲ್ಲ. ಯಾರು ತಪಸ್ಸಿನಿಂದ ತಮ್ಮ ತನುವನ್ನು ದಂಡಿಸಿಲ್ಲವೊ ಅವರಿಗೆ ಪರಮ ತುಷ್ಟಿದಾಯಕ ಖಾದ್ಯ ದೊರೆಯುವುದಿಲ್ಲ, ಎಂಬುದು ಆ ಶ್ಲೋಕದ ಅರ್ಥ.

ಮುಂದೆ ಯಾವುದಾದರೂ ಒಬ್ಬ ಮುಸಲ್ಮಾನನು ತನ್ನ ಪ್ರಾರ್ಥನೆಯ ಪದ್ಧತಿಗಾಗಿ ವೇದದಿಂದ ಸಹಾಯ ದೊರೆಯುತ್ತದೆಯೆಂದು ಹೇಳಿದಲ್ಲಿ ನಾನು ಅದನ್ನು ನಿಷೇಧಿಸುವುದಿಲ್ಲ. ವೇದ ಇಡೀ ಮಾನವಕುಲದ ಗ್ರಂಥವಾಗಿದೆ. **ನಾನಾಧರ್ಮಣಾಂ ಪೃಥಿವೀಂ ವಿವಾಚಸಂ** – ಈ ಮಂತ್ರದಲ್ಲಿ ನಾನಾ ಧರ್ಮ ಮತ್ತು ಭಾಷೆಗಳ ಅಸ್ತಿತ್ವವಿದೆಯೆಂದು ಒಪ್ಪಿಕೊಳ್ಳಲಾಗಿದೆ. ಆದ್ದರಿಂದ ಯಾವುದೇ ಮುಸಲ್ಮಾನನೊಬ್ಬ ಮಂಡಿಯೂರಿ ಪ್ರಾರ್ಥನೆ ಮಾಡುವುದಕ್ಕೂ ವೇದದ ಆಧಾರ ಸಿಗುತ್ತದೆಂದು ಹೇಳಿದಲ್ಲಿ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಈ ಮಾತನ್ನು ನಾನು ಒಪ್ಪುವುದಕ್ಕೆ ಕಾರಣ ಅವನಿಗೆ ಅದು ಆಧಾರವಾಗಿದೆ ಮತ್ತು ಅವನು

ನನ್ನ ಸಹೋದರ ಎಂಬುದಕ್ಕಾಗಿ. ನಾವು ವೇದಾರ್ಥಕ್ಕಾಗಿ ಎಷ್ಟೇ ಪ್ರಯತ್ನ ಮಾಡುತ್ತಿದ್ದರೂ ಯಾರೆಲ್ಲರು ವೇದಾರ್ಥ ಪ್ರೇಮಿಗಳಿದ್ದಾರೊ ಅವರ ಸಹೋದರ ನಾನೆಂದು ಆಗಾಗ್ಗೆ ಹೇಳುತ್ತಾ ಬಂದಿದ್ದೇನೆ. ಗಾಯತ್ರಿ ಮಂತ್ರದ ಉಚ್ಚಾರಣೆ ಮಾಡುವಾಗ ನನಗುಂಟಾಗುವ ಆನಂದದಷ್ಟೆ ಆನಂದ ಮುಸಲ್ಮಾನರೊಂದಿಗೆ ಮಂಡಿಯೂರಿ ಪ್ರಾರ್ಥನೆ ಮಾಡುವುದರಲ್ಲಿ ದೊರೆಯುತ್ತದೆ. ವೇದದಲ್ಲಿ ಒಂದು ಮಂತ್ರವಿದೆ – **ಸಂಜಾನಾನ ಉಪ ಸೀದಾನ್ನ ಭಿಜೂ** (೧.೧೨.೬) ಇದರಲ್ಲಿ ಮಂಡಿಯೂರಿ ಪ್ರಾರ್ಥನೆ ಮಾಡುವ ಮಾತನ್ನು ಹೇಳಲಾಗಿದೆ. ಮುಸಲ್ಮಾನರು ಮಂಡಿಯೂರಿ ನಮಾಜವನ್ನು ಓದುತ್ತಾರೆ, ಒಟ್ಟಿಗೆ ಏಳುತ್ತಾರೆ – ಕೂಡುತ್ತಾರೆ. ಸಮ್ಮಿಲಿತ ಉಪಾಸನೆ ಮಾಡುತ್ತಾರೆ. ವೇದ ಭಗವಾನನ ಆಧಾರ ಪಡೆಯುವ ಹಕ್ಕು ಎಲ್ಲರಿಗೂ ಇದೆ. ವೇದವು ಮಾನವಕುಲದ ಗ್ರಂಥ. ಈ ಮಾತನ್ನು ಮಾನವಕುಲ ಒಪ್ಪಿಕೊಂಡಿದೆ. ಲಿಖಿತ ಸಾಕ್ಷಿಯಾದ ವೇದದಂಥ ಬೇರೆ ಪ್ರಾಚೀನ ಗ್ರಂಥ ಬಹುಶಃ ದೊರೆಯಲಾರದು. ಆದ್ದರಿಂದ ತಮ್ಮದೇ ಆದ ರೀತಿಯಲ್ಲಿ ಅರ್ಥ ಮಾಡಿಕೊಳ್ಳುವ ಅಧಿಕಾರ ಎಲ್ಲರಿಗೂ ಇದೆ.

ವೇದದಿಂದ ನನಗ್ಯಾವ ಅರ್ಥ ದೊರೆಯುತ್ತದೊ ಅದು ನನಗೆ ಸಾಕು. ಅದರಲ್ಲಿ ನನಗೆ ಆನಂದವಿದೆ. ನನ್ನ ದೃಷ್ಟಿ ಉಪನಿಷತ್ತಿನದಾಗಿದೆ. ಬ್ರಾಹ್ಮಣ ಗ್ರಂಥಗಳಲ್ಲಿಯ ಅರ್ಥ ಕರ್ಮಕಾಂಡವನ್ನವಲಂಬಿಸಿದ್ದರೆ, ಉಪನಿಷತ್ತುಗಳಲ್ಲಿ ಅರ್ಥ ಜ್ಞಾನವನ್ನವಲಂಬಿಸಿದೆ.

ವೇದದ ಅರ್ಥ ಮಾಡುವಾಗ ನಾವು ಅಭಿಮಾನವನ್ನು ಬಿಡಬೇಕೆಂಬ ಮಾತನ್ನು ಗಮನದಲ್ಲಿರಿಸಿಕೊಳ್ಳಬೇಕು. ನಾವು ವೇದದ ನಮ್ಮ ನಮ್ಮ ಅರ್ಥವನ್ನು ಮಾಡಿಕೊಳ್ಳೋಣ ಆದರೆ ಆ ಬಗ್ಗೆ ನಮಗೆ ಅಭಿಮಾನವಿರಕೂಡದು. ಬೇರೆಯವರು ತಮ್ಮದೇ ಆದ ಅರ್ಥ ಮಾಡಿದಾಗ ಮತ್ತು ಆ ಅರ್ಥವು ನಾವು ಮಾಡಿದ ಅರ್ಥಕ್ಕಿಂತ ಭಿನ್ನವಾಗಿದೆಯೆಂದು ಗೊತ್ತಾದಾಗಲೂ ನಾವು ಅದನ್ನ ಗೌರವಿಸಬೇಕು. ನಮ್ರತೆಯ ಹೊರತಾಗಿ ವೇದದ ಅರ್ಥದ ಸುಳಿವೆ ಸಿಗುವುದಿಲ್ಲ.

ಶಬ್ದಗಳ ರಚನೆಯಾಗುತ್ತಿದ್ದ ಕಾಲದಲ್ಲಿದ್ದಂಥದ್ದು ವೇದ. ಆದ್ದರಿಂದ ಇಂದಿನ ಸಮಾಜಕ್ಕೆ ಸಂಬಂಧಿಸಿದಂಥ ಸಂದರ್ಭಗಳು ಅದರಲ್ಲಿ ಇರುತ್ತವೆಂಬ ಅಪೇಕ್ಷೆಯನ್ನು ಇಟ್ಟುಕೊಳ್ಳುವ ಹಾಗಿಲ್ಲ. ವೇದದ ಒಟ್ಟಾರೆ ರಚನೆ ಆಧ್ಯಾತ್ಮಿಕ ಸಾಧನೆಯನ್ನು ಕುರಿತಾಗಿದೆ – **ಸರ್ವೆ ವೇದ ಯತ್ ಪದಮ ಮನಂತಿ** – ಇಡೀ ವೇದ ಬ್ರಹ್ಮಪದದ ಮನನಕ್ಕೆ ಸಂಬಂಧಿಸಿದ್ದು.

ವೇದದ ಅರ್ಥವನ್ನು ಅನೇಕ ಪ್ರಕಾರವಾಗಿ ಮಾಡಿದ್ದರೂ ಮೂಲ ಆಧಾರ ಪರಮಾತ್ಮನ ಉಪಾಸನೆಗೆ ಸಂಬಂಧಿಸಿದ್ದಾಗಿದೆ ಎಂಬುದನ್ನು ನಾವು ತಿಳಿಯುವುದು ಅಗತ್ಯ. ಈ ಉಪಾಸನೆಯನ್ನು ನಾವು ಮಾಡದೆ ಕೇವಲ ಶಬ್ದಗಳಲ್ಲಿ ಸಿಕ್ಕಿಹಾಕಿಕೊಂಡರೆ ವೇದದ ರಹಸ್ಯ ತಿಳಿಯಲಾರೆವು. ಶಬ್ದಗಳ

ಅಗತ್ಯವಿದೆಯೆಂಬುದೇನೊ ಸರಿ. ಆದರೆ ಅಂತಿಮವಾಗಿ ನಾವು ನಿಶ್ಯಬ್ದವನ್ನೆ ತಲುಪಬೇಕಿದೆಯೆಂಬುದನ್ನು ಮರೆಯಕೂಡದು.

ವೇದವು ಅಕ್ಷರರಾಶಿ ಎಂದು ವೇದಗಳ ಬಗ್ಗೆ ಹೇಳಲಾಗಿದೆ. ಶಬ್ದರಾಶಿ ಎಂದು ಹೇಳಲಾಗಿಲ್ಲ. ನೀವು ವೇದದ ಪದಚ್ಛೇದವನ್ನು ಮಾಡಿದಲ್ಲಿ ಅದು ನಿಮ್ಮ ಭಾಷ್ಯವಾಗುವುದು. ಒಂದು ಸಲ ಆರ್ಯಸಮಾಜಿಗಳು ಮತ್ತು ಸನಾತನಿಗಳ ಮಧ್ಯೆ ಚರ್ಚೆ ನಡೆಯಿತು. ದೇವರ ಮೂರ್ತಿಯಿಲ್ಲವೆಂಬುದು ಆರ್ಯ ಸಮಾಜದ ಸಿದ್ಧಾಂತವಾಗಿದೆ. ಅವರು ಮೂರ್ತಿಪೂಜೆಯನ್ನು ಒಪ್ಪುವುದಿಲ್ಲ. ಇಂಥ ಸಿದ್ಧಾಂತ ಮುಸಲ್ಮಾನರಲ್ಲಿಯೂ ಇದೆ. ಆದ್ದರಿಂದ ವಿಗ್ರಹ ಪೂಜೆಯ ನಿರಾಕರಣದ ಸಿದ್ಧಾಂತದ ಆಧಾರಕ್ಕಾಗಿ ಆರ್ಯಸಮಾಜಿಗಳು ವೇದದಿಂದ **'ನ ತಸ್ಯ' ಪ್ರತಿಮ ಅಸ್ತಿ ಯಸ್ಯ ನಾಮ ಮಹತ್ ಯಶಃ** – ಎಂಬ ಮಂತ್ರವನ್ನು ತೆಗೆದುಕೊಂಡರು. ಇದರ ಅರ್ಥ, "ಭಗವಂತನ ಹೆಸರೆ ಬಹು ಯಶಸ್ವಿಯಾಗಿರುವಾಗ ಅವನದು ಯಾವುದೇ ವಿಗ್ರಹ ಇರಲಾರದು. ಆದ್ದರಿಂದ ಭಗವಂತನ ಮೂರ್ತಿಯನ್ನು ರಚಿಸಬೇಡ, ಹೆಸರನ್ನು ತೆಗೆದುಕೊಳ್ಳುತ್ತಿರು." ಇದಕ್ಕೆ ಉತ್ತರವಾಗಿ ಸನಾತನಿಗಳು 'ನತಸ್ಯ' ಪ್ರತಿಮ ಅಸ್ತಿ ಅಂದರೆ ನಮ್ರವಾಗಿರುವಂಥವರಿಗಾಗಿ ಭಗವಂತನ ಪ್ರತಿಮೆ ಇದೆ ಎಂದು ಹೇಳಿದರು.

ಇದರ ಅರ್ಥ ಅವರವರ ಭಾಷ್ಯ ಇದೆ ಎಂದಾಯಿತು. ಎರಡೂ ಸರಿಯಿರಲು ಸಾಧ್ಯ.ಯಾರು ಪದಚ್ಛೇದ ಮಾಡಿದರೊ ಅವರು ಭಾಷ್ಯ ಮಾಡಿದರು. ಭಾಷ್ಯ ಪ್ರಮಾಣವಲ್ಲ, ಅಕ್ಷರ ಪ್ರಮಾಣವಿದೆ. ಅನುವಾದವಂತೂ ಪೂರ್ಣವಾಗಿ ಉಪಯೋಗಿ ಇಲ್ಲ. ಇಂಗ್ಲಿಷಿನಲ್ಲಿ ಅನುವಾದ ಮಾಡುವುದಾದಲ್ಲಿ ಅಗ್ನಿ ಎಂಬುದನ್ನು ಯಾವ ರೀತಿ ಅನುವಾದಮಾಡುವಿರಿ? ಅಗ್ನಿ ಎಂದರೂ 'ಫಾಯರ್' ಮತ್ತು ವಹ್ನಿ ಅಂದರೂ 'ಫಾಯರ್'. ಇಂಗ್ಲಿಷಿನಲ್ಲಿ ಒಂದೇ ಶಬ್ದವಿದೆ. ಆದರೆ ವೇದದ ಮೊದಲನೆಯ ಮಂತ್ರ – ಅಗ್ನಿ ಮೀಳೆ ಪುರೋಹಿತಮ್ ಇದರಲ್ಲಿ ವಹ್ನಿ ಮೀಳೆ ಪುರೋಹಿತಮ್ – ಅಗ್ನಿಯ ಸ್ಥಳದಲ್ಲಿ ವಹ್ನಿಯನ್ನು ಉಪಯೋಗಿಸಲಾಗುವುದಿಲ್ಲ. ಆದ್ದರಿಂದ ಅನುವಾದವನ್ನು ಹೇಗೆ ಮಾಡುವಿರಿ? ಭಾಷ್ಯವು ವೇದವಲ್ಲ. ಪರಿಚ್ಛೇದ ಕೂಡ ವೇದವಲ್ಲ ; ಸಂಹಿತೆ ಅಂದರೆ ಅಕ್ಷರವೇದ. ಎಲ್ಲ ಅಕ್ಷರಗಳನ್ನು ಒಟ್ಟಿಗೆ ಬರೆದಿರುವಂಥದು. ನೀವು ಶಬ್ದಗಳ ವ್ಯಾಖ್ಯೆಯನ್ನು ಮಾಡಿದಲ್ಲಿ ಅದಕ್ಕೆ ಋಗ್ವೇದ ಹೊಣೆಯಲ್ಲ, ನೀವು ಹೊಣೆಗಾರರು. ವಿನೋಬಾ ಪದಚ್ಛೇದ ಮಾಡಿದಲ್ಲಿ ಅದು ವಿನೋಬಾನ ವೇದವಾಗುತ್ತದೆ.

ಇಂಗ್ಲೆಂಡಿನಲ್ಲಿ ಗ್ರಿಫಿತ್ ಎಂಬುವವರು ರಾಮಯಣ, ಮಹಾಭಾರತ ಮತ್ತು ವೇದದ ಅನುವಾದ ಮಾಡಿದ್ದಾರೆ. ಸಾಯಣಾಚಾರ್ಯರು ವೇದದ ಮೇಲೆ ಭಾಷ್ಯ ಬರೆದರು. ಸಾಯಣರು ಆಗಿ ಹೋಗಿ ೪೦೦ ವರ್ಷ. ವೇದ ಆಗಿ ಹೋಗಿ ೧೦,೦೦೦ ವರ್ಷ. ಮ್ಯಾಕ್ಸ್ ಮುಲ್ಲರ್ ಕೂಡ ಭಾಷ್ಯ ಬರೆದಿದ್ದಾರೆ. ಅದೆಲ್ಲವೂ ಅವರವರ ಭಾಷ್ಯವಾಗಿದೆ.

ಈ ಪ್ರಕಾರವಾಗಿ ಐತಿಹಾಸಿಕ, ಆದಿಭೌತಿಕ, ಆದಿದೈವಿಕ, ಆಧ್ಯಾತ್ಮಿಕ ಭಾಷ್ಯಗಳೂ, ಸಂಶೋಧನೆಗಳೂ ಇರಲು ಸಾಧ್ಯವಿದೆ.

ಪ್ರಾಣ, ಪ್ರಾಣಿ ಮನ ಈ ಮೂರರ ಸಂಯೋಗದಿಂದ ಶಬ್ದ ರೂಪಗೊಳ್ಳುತ್ತದೆ. ಆದ್ದರಿಂದ ವೇದ ಪ್ರಾಣಮಯ, ಇಂದ್ರಿಯಮಯ ಮನೋಮಯ ಎಂದು ಹೇಳಲಾಗಿದೆ. ಪ್ರತಿಯೊಂದಕ್ಕೂ ತನ್ನದೇ ಆದ ಸ್ಥಾನವಿದೆ. ನೀವು ಯಾರಿಗಾದರೂ ಪತ್ರ ಬರೆದು ಕಳುಹಿಸಿದಲ್ಲಿ ಆ ಪತ್ರವೂ ಕೂಡ ಮಾತನಾಡುತ್ತದೆ. ಏಕೆಂದರೆ ಅದರಲ್ಲಿ ಶಬ್ದಗಳಿರುತ್ತವೆ.

ವಾಣಿಯು ನಾಲ್ಕು ಪ್ರಕಾರದ್ದಿದೆ ಎಂಬುದಾಗಿ ತಿಳಿಯಲಾಗುತ್ತದೆ. ಪರಾವಾಣಿಯೆಂದು ಕರೆಯಲಾಗುವಂಥದು ಕೇವಲ ಸಂಕಲ್ಪಮಯ, ಸೂಕ್ಷ್ಮ. ಅದರ ಉಲ್ಲೇಖ ಇಲ್ಲಿ ಇಲ್ಲ. ಏಕೆಂದರೆ ಇಡೀ ಸೃಷ್ಟಿಯೆ ಸಂಕಲ್ಪಮಯ. ಇನ್ನುಳಿದ ಮೂರು – ಪ್ರಾಣವಾಣಿ, ಮನೋವಾಣಿ ಮತ್ತು ವೈಖರೀವಾಣಿ ಸ್ಥೂಲ. ಆದ್ದರಿಂದ ಈ ಮೂರರ ಉಲ್ಲೇಖವನ್ನು ಮಾತ್ರ ಮಾಡಲಾಗಿದೆ.

ಶಬ್ದ ಬ್ರಹ್ಮವೆಂದರೆ ವೇದ. ಅದು ಅತ್ಯಂತ ದುರ್ಭೋದವಾಗಿದೆ. ಏಕೆಂದರೆ ಅದರ ಅರ್ಥವು ಮುಚ್ಚಲ್ಪಟ್ಟಿದೆ. ಸಂಸ್ಕೃತದಲ್ಲಿ ವೇದವನ್ನು 'ಛಂದಸ್ಸ್' ಎಂದು ಕರೆಯುತ್ತಾರೆ. ಅಂದರೆ ಮುಚ್ಚಿರುವುದು. ಅಂದರೆ ಅದಕ್ಕೆ ಯಾವ ತೀರವಿಲ್ಲ, 'ಅನಂತ ಪಾರಂ'. ಇದು ಗಂಭೀರ ಮತ್ತು ದುರ್ವಿಗ್ರಾಹ್ಯ. ಅಂದರೆ ಅದರಲ್ಲಿ ಅವಗಾಹನ ಮಾಡುವಂಥದು ಇಲ್ಲ. ಅದು ಸಮುದ್ರದಂತಿದೆ. ಯಾವ ರೀತಿ ಸಮುದ್ರವು ಗಂಭೀರವೂ, ಅನಂತಪಾರವೂ, ದುರ್ವಿಗ್ರಾಹ್ಯವೂ ಆಗಿರುತ್ತದೋ ಹಾಗೆ ಇದೆ ವೇದ.

ವೇದ ಪರೋಕ್ಷವಾಗಿ ಮಾತನಾಡುತ್ತದೆ. ನೇರವಾಗಿ ಮಾತನಾಡುವುದಿಲ್ಲ. "ನೀನು ಇಂಥ ಕೆಲಸವನ್ನು ಮಾಡು" ಎಂದು ಹೇಳದೆ ಇಂಥ ಕೆಲಸವನ್ನು ಮಾಡುವುದು ಒಳ್ಳೆಯದು ಎಂದು ಹೇಳುತ್ತದೆ. ಅಂದರೆ ಪರ್ಯಾಯವಾಗಿ ಮಾತನಾಡುತ್ತದೆ. ಇದರ ಅರ್ಥ ವೇದ ಬಹು ನಮ್ರತೆಯಿಂದ ಮಾತನಾಡುತ್ತದೆ. ಪ್ರತ್ಯಕ್ಷವಾಗಿ ಮಾತನಾಡದೆ ಪರೋಕ್ಷವಾಗಿ ಮಾತನಾಡುತ್ತದೆ. ಇನ್ನೊಬ್ಬರನ್ನು ಚುಚ್ಚುವಂಥ ಭಾಷೆಯನ್ನು ಮಾತನಾಡುವುದಿಲ್ಲ. ಆದ್ದರಿಂದ ವೇದದ ವಚನಗಳನ್ನು ಅರ್ಥ ಮಾಡಿಕೊಳ್ಳವುದು ಕಠಿಣ. ಮಗುವಿಗೆ ಕಲಿಸಬೇಕೆಂದರೆ ಅದರ ಅಭಿರುಚಿಯನ್ನು ನೋಡಿ ಅದರ ಮನಕ್ಕನುಸಾರವಾಗಿ ಪ್ರೇಮದಿಂದ ಒಡಗೂಡಿ ಕಲಿಸಬೇಕಾಗುತ್ತದೆ. ಅದೇ ರೀತಿ ವೇದ ಪರೋಕ್ಷ ಪದ್ಧತಿಯಿಂದ ಮಾತನಾಡುತ್ತದೆ. ಮಕ್ಕಳಿಗೆ ಜೀರ್ಣವಾಗುವಂಥದನ್ನು ನೋಡಿಕೊಂಡು ಉಪದೇಶವನ್ನು ಕೊಡುತ್ತದೆ. ಹಸು ಹುಲ್ಲು ತಿಂದು ಮಕ್ಕಳಿಗೆ ಹಾಲು ಕೊಡುವ ರೀತಿ. ವೇದವು ಸ್ವತಃ ಹುಲ್ಲನ್ನು ತಿಂದು ಮಕ್ಕಳಾದ ನಮಗೆ ಹಾಲನ್ನು ಕೊಡುತ್ತದೆ.

(ಮುಂದುವರಿಯುವುದು ....)

ತಂದೆ ರಾಜಾಜಿ

–ವಿನೋಬಾ

[ಇಡೀ ಆಧ್ಯಾತ್ಮಿಕ ಚಿಂತನದ ಗುರಿ 'ಗುಣಗ್ರಹಣ' ಎಂಬುದಾಗಿ ಭಾವಿಸಿದ್ದ ಸಂತ ವಿನೋಬಾ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು; ಕಾರಾಗೃಹವಾಸ ಅನುಭವಿಸಿದ್ದರು; ಆಶ್ರಮಗಳನ್ನು ಸ್ಥಾಪಿಸಿದ್ದರು. ಅವರು ತಮ್ಮ ಸಮಕಾಲಿನ ವ್ಯಕ್ತಿಗಳನ್ನು ರೇಖಾ ಚಿತ್ರಣದಂತೆ ಪರಿಚಯ ಮಾಡಿಕೊಟ್ಟಿದ್ದಾರೆ. ವಿನೋಬಾರ ಅಂಥ ಸಮಕಾಲೀನರಲ್ಲಿ ರಾಜಾಜಿ ಕೂಡ ಒಬ್ಬರು. ಡಿಸೆಂಬರ್ ೧೦ ಅವರ ಜನ್ಮದಿನ]

ರಾಜಾಜಿಯವರೊಂದಿಗೆ ನನ್ನ ಮೊದಲ ಭೇಟಿ ೧೯೨೩ರಲ್ಲಿ ಆಗಿತ್ತು. ಆಗ ನಾನು ಝುಂಡಾ ಸತ್ಯಾಗ್ರಹದಲ್ಲಿ ಭಾಗವಹಿಸಿ ಅಂಕೋಲಾ ಕಾರಾಗೃಹದಲ್ಲಿದ್ದೆ. ಅವರು ನನ್ನನ್ನು ಭೇಟಿ ಮಾಡಲು ಅಲ್ಲಿಗೆ ಬಂದಿದ್ದರು. ಅಲ್ಲಿಯ ನನ್ನ ಪರಿಸ್ಥಿತಿಯನ್ನು ನೋಡಿದರು; ಕೇವಲ ವಾತ್ಸಲ್ಯಭಾವದಿಂದ ಪ್ರೇರಿತರಾಗಿ ಅವರು ನನ್ನ ಈ ವಿಷಯವಾಗಿ ಪತ್ರಿಕೆಗಳಲ್ಲಿ ಒಂದು ಲೇಖನವನ್ನು ಬರೆದರು. ಅಂದಿನಿಂದ ಅವರ ವಾತ್ಸಲ್ಯದೃಷ್ಟಿ ಸತತವಾಗಿ ನನ್ನ ಮೇಲೆ ಉಳಿಯಿತು. ಆದ್ದರಿಂದ ಅವರಿಗೆ ನಾನೊಂದು ಪುಟ್ಟ ಪತ್ರ ಬರೆದೆ ತಮಿಳಿನಲ್ಲಿ. ಅದರಲ್ಲಿ ನಾನು ರಾಜಾಜಿಯವರನ್ನು 'ತಂದೈ' ಎಂದು ಕರೆದಿದ್ದೆ. 'ತಂದೈ' ಅಂದರೆ ತಂದೆ. ಪತ್ರವನ್ನು ಅವರ ಜನ್ಮದಿನದಂದು ಬರೆದಿದ್ದೆ. ಆದ್ದರಿಂದ ನಾನು ಅದರಲ್ಲಿ "ಪಲ್ಲಾಂಡು ಪಲ್ಲಾಯಿರನ್ತಾನಾಡುವಾಲಹ", ಅಂದರೆ, "ನೀವು ಸಾವಿರಸಾವಿರ ವರ್ಷ ಬಾಳಿರಿ". ಎಂದು ಬರೆದಿದ್ದೆ.

ಅಖಿಲ ಭಾರತ ಮಟ್ಟದಲ್ಲಿ ಗಾಂಧೀಜಿಯೊಂದಿಗೆ ಐದು ಜನ ಸಹೋದ್ಯೋಗಿಗಳಿದ್ದರು. ನಾನು ಅವರನ್ನು '**ಪಾಂಚಾಯತನ**' ಎಂದು ಕರೆದಿದ್ದೆ. ಅವರೆಂದರೆ, ಜವಾಹರಲಾಲ ನೆಹರು, ಸರದಾರ ಪಟೇಲ, ರಾಜೇಂದ್ರಬಾಬು, ಅಬುಲ್ ಕಲಾಮ್ ಆಜಾದ್ ಮತ್ತು ರಾಜಾಜಿ. ಈ ಐವರು ಗಾಂಧೀಜಿಯವರೊಂದಿಗೆ ಮತಭೇದವನ್ನು ಹೊಂದಿರುತ್ತಿದ್ದರು. ಆದರೆ ಅಂತಿಮವಾಗಿ ವಿಚಾರಕ್ಕೆ ವಿರೋಧವಾದಾಗ ರಾಜಾಜಿ ಗಾಂಧೀಜಿಯವರನ್ನು ಬಲವಾಗಿ ವಿರೋಧಿಸುತ್ತಿದ್ದರು. ಆ ಕಾರಣದಿಂದಾಗಿ ಅನೇಕ ಜನರು ರಾಜಾಜಿ ಮೇಲೆ ಕೋಪಗೊಂಡರು. ಆದರೆ ತಮಗೆ ಸತ್ಯವೆಂದು ಕಂಡುಬಂದುದನ್ನು ಮಾತನಾಡುವ ಸ್ವಭಾವ ರಾಜಾಜಿಯವರದಾಗಿತ್ತು. ಯಾರ ಬಗ್ಗೆಯೂ ಅವರ ಮನಸ್ಸಿನಲ್ಲಿ ವೈರಭಾವ ಇರಲಿಲ್ಲ.

ಒಂದು ಬಾರಿ ರಾಜಾಜಿ ಸರಿಯಾದುದನ್ನೇ ಹೇಳಿದ್ದರು, "ಗಾಂಧೀಜಿಯವರಿಗೆ ಭಕ್ತಿಯಲ್ಲಿ ವಿಶೇಷ ಶ್ರೇಣಿಗಳಿರುವುದು ಒಪ್ಪಿಗೆ ಇರಲಿಲ್ಲ. ಯಾವ ನಾಮವನ್ನು ಅತ್ಯಂತ ಸಾಮಾನ್ಯ ಅಶಿಕ್ಷಿತ ಸ್ತ್ರಿ–ಪುರುಷರು ಕೂಡ ಉಚ್ಛರಿಸಲು ಸಾಧ್ಯವಿತ್ತೋ ಅದೇ 'ರಾಮನಾಮ'ವನ್ನು ಬಾಪು ಇಷ್ಟಪಟ್ಟಿದ್ದರು."

ರಾಜಾಜಿಯವರ ಜೀವನಕ್ಕೆ ಅನೇಕ ಮುಖಗಳಿವೆ. ಅವುಗಳಲ್ಲಿ ಜನರನ್ನು

ಆಕರ್ಷಿಸಿದ್ದು ರಾಜನೀತಿಯ ಮುಖ. ಅವರು ರಾಜನೀತಿಯ ವಿಷಯವಾಗಿ ಸತತವಾಗಿ ಏನನ್ನಾದರೂ ಹೇಳುತ್ತಾರೋ ಅಂಥವರ ವಿಚಾರಗಳ ಬಗ್ಗೆ ಅನೇಕರು ಭಿನ್ನಾಭಿಪ್ರಾಯ ತಾಳುವುದು ಸಹಜ. ರಾಜಾಜಿಯವರ ಹೇಳಿಕೆಗಳಲ್ಲಿ ಗುಣವಿರಲಿ ಅಥವಾ ದೋಷವಿರಲಿ ಅದು ರಾಜನೀತಿಯ ದೋಷವೆ ಹೊರತು ರಾಜಾಜಿಯವರದಲ್ಲ. ಆದರೆ ಅವರು ಯಾವುದೇ ವಿಚಾರವನ್ನು ಮಂಡಿಸಲಿ ಅದನ್ನು ತಟಸ್ಥಮನೋಭೂಮಿಕೆಯಿಂದ ಮಂಡಿಸುತ್ತಿದ್ದರು. ಪರಿಸ್ಥಿತಿಯಲ್ಲಿ ಬದಲಾವಣೆ ಉಂಟಾದಾಗ ತಮ್ಮ ವಿಚಾರವನ್ನು ಸಹ ಬದಲಾಯಿಸಿಕೊಳ್ಳಲು ಅವರಿಗೆ ಕೊಂಚವೂ ಅಂಜಿಕೆ ಇರಲಿಲ್ಲ. ಎರಡನೇ ಮಾತೇನೆಂದರೆ, ಯಾರ ಬಗ್ಗೆಯೇ ಆಗಲಿ ಟೀಕೆ ಮಾಡುವುದಾದರೆ ಅದನ್ನು ಸಹ ತಟಸ್ಥ ಭಾವನೆಯಿಂದ ಮಾಡುತ್ತಿದ್ದರು. ಅವರು ಯಾರೊಬ್ಬರ ಬಗ್ಗೆಯೂ ಪೂರ್ವಗ್ರಹ ಪೀಡಿತರಾಗಿರಲಿಲ್ಲ. **'ಸಬ ಮಹಂರಮ ರಹಿಯಾ ಪ್ರಭು ಏಕಿ, ಪೇಖಿ ಪೇಖಿ ನಾನಕ ಬಿಗಸಾಯಿ'** ಅಂದರೆ 'ಪರಮಾತ್ಮ'ನು ಎಲ್ಲರ ಹೃದಯದಲ್ಲಿಯೂ ವಿರಾಜಮಾನನಾಗಿದ್ದಾನೆ, ನಾನಕ್ ಅದನ್ನು ನೋಡಿ–ನೋಡಿ ನಗುತ್ತಾನೆ ಎಂಬ ಮಾತಿನಲ್ಲಿ ರಾಜಾಜಿಯವರಿಗೆ ನಂಬಿಕೆಯಿತ್ತು.

ರಾಜಾಜಿ ಯಾವಾಗಲೇ ಮಾತನಾಡಲಿ, ಟೀಕೆಯನ್ನೇ ಮಾಡಲಿ ಅದನ್ನು ನಗುನಗುತ್ತಾ ಮಾಡುತ್ತಿದ್ದರು.

ಒಂದು ಸಲ ರಾಜಾಜಿ ಅಮೇರಿಕೆಗೆ ಹೋಗಿದ್ದರು, ಅಲ್ಲಿ ಬಹಳಷ್ಟು ಚರ್ಚೆ ನಡೆಯಿತು. ಅದರೆ ಅದರಿಂದೇನೂ ಪ್ರಯೋಜನವಾಗಲಿಲ್ಲ. ಅವರು ಭಾರತಕ್ಕೆ ಬಂದಾದ ಮೇಲೆ ಅವರನ್ನು "ಚರ್ಚೆ ಹೇಗಿತ್ತು? 'ಫ್ರುಟ್‌ಫುಲ್' (ಸಫಲ) ಆಯಿತೆ?" ಎಂದು ಕೇಳಿದರು. ಅದಕ್ಕೆ ಅವರು ವಿನೋದವಾಗಿ, "ಫ್ಲಾವರ್‌ಫುಲ್" (ಪುಷ್ಪಿತ) ಆಯಿತು," ಎಂದು ಉತ್ತರಿಸಿದರು. 'ಫ್ರುಟ್‌ಲೆಸ್' (ನಿಷ್ಫಲ) ಎಂದು ಹೇಳುವುದಕ್ಕೆ ಬದಲಾಗಿ 'ಫ್ಲಾವರ್‌ಫುಲ್' ಎಂದು ಹೇಳಿದರು. ಹೀಗಿತ್ತು ಅವರ ಸುಂದರ ಭಾಷೆ.

ರಾಜನೀತಿಯ ವಿಚಾರಗಳನ್ನು ಪ್ರಕಟಿಸುವುದರಲ್ಲಿ ಅವರು ಯಾವಾಗಲೂ ಜಾಗೃತರಾಗಿದ್ದರು. ಜಾಗೃತಿ ಎಂಬುದು ರಾಜನೀತಿಗೆ ಬಹು ದೊಡ್ಡ ರಕ್ಷಾಕವಚವಾಗಿದೆ. ಅದಿಲ್ಲದಿದ್ದರೆ ರಾಜನೀತಿ ಎಂದೂ ಸಫಲವಾಗುವುದಿಲ್ಲ. ಅವರು 'ಸೆಂಟಿನೆಲ್' (ಕಾವಲುಗಾರ) ಕೆಲಸ ಮಾಡುತ್ತಿದ್ದರು. ಜಾಗರೂಕರಾಗಿ ಇರುತ್ತಿದ್ದರು. ಅದರಿಂದಾಗಿ ಅವರು ತಪ್ಪುದಾರಿ ಹಿಡಿಯುವ ಸಂಭವ ಇರಲಿಲ್ಲ. ನಮ್ಮಲ್ಲಿಯ ಹಲವಾರು ಸಜ್ಜನರು ಯಾರು ಗಾಂಧೀಜಿಯವರೊಂದಿಗೆ ಇದ್ದರೋ ಅವರು ಒಂದಿಲ್ಲ ಒಂದು ಕಾರಣದಿಂದ 'ಮಿಲಿಟರಿ'ಯ ಸಮರ್ಥನೆ ಮಾಡುತ್ತಿದ್ದರು. ಆ ಸಮಯದಲ್ಲಿ ಕಾಂಚೀಪುರಂನಲ್ಲಿ ನಡೆದ ಸಮ್ಮೇಳನದಲ್ಲಿ ರಾಜಾಜಿಯವರು, "ಪಾಕೀಸ್ತಾನವನ್ನು ನೋಡಿ ಹೆದರಿಕೊಳ್ಳುವ ಎಷ್ಟು ಜನರಿದ್ದೀರೋ ಅವರಿಗೆ ಸಮ್ಮೇಳನಕ್ಕೆ ಬರಲು ಯಾವ ಹಕ್ಕೂ ಇಲ್ಲ. ಅಂಥವರು ಸಮ್ಮೇಳನದಿಂದ ಹೊರಗೆ ಹೋಗಬೇಕು," ಎಂದು ಕಠೋರವಾಗಿ ನುಡಿದರು. ಆಗ ನಾನು "ಈ ವೃದ್ಧ ಮನುಷ್ಯನ ಮಾತಿನಲ್ಲಿ ಈ ಶಕ್ತಿ ಎಲ್ಲಿಂದ ಬಂತು? ಈ ಶಕ್ತಿ ಶರೀರದ್ದಲ್ಲ, ಆತ್ಮದ್ದು" ಎಂದುಕೊಂಡೆ.

ರಾಜಾಜಿ ಗವರ್ನರ್ ಜನರಲ್ ಆಗಿದ್ದರು, ಮುಖ್ಯ ಮಂತ್ರಿಯೂ ಆಗಿದ್ದರು.

ಅವರು ಅನೇಕ ಪ್ರಕಾರದ ಕೆಲಸ ಮಾಡಿದರು. ಕಾನೂನಿನ ದೃಷ್ಟಿಯಿಂದ ಅವರು ನೇಕಾರರಿಗಾಗಿ ಅನೇಕ ಬೇಡಿಕೆಗಳನ್ನು ಮುಂದೆ ಇಟ್ಟಿದ್ದರು. ಮದ್ರಾಸ್ ರಾಜ್ಯದಲ್ಲಿ ಎರಡನೇ ಮಹತ್ವದ ಜನಸಂಖ್ಯೆ ನೇಕಾರರದಿತ್ತು. ಅಲ್ಲಿ ಹತ್ತು ಜನರಲ್ಲಿ ಒಬ್ಬ ನೇಕಾರನಿದ್ದ, ಅವರಿಗೆ ಕೆಲಸವಿರಲಿಲ್ಲ. ಆದ್ದರಿಂದ ಅವರು ಈ ಬೇಡಿಕೆಗಳನ್ನು ಇಟ್ಟಿದ್ದರು. ಅವರು ಕಂಟ್ರೋಲ್ ತೆಗೆದು ಹಾಕಿದ್ದರು. ಅದರಿಂದಾಗಿ ಜನರಲ್ಲಿ ವಿಶ್ವಾಸವುಂಟಾಗಿತ್ತು. "ನನ್ನ ಜೀವನ-ಚರಿತ್ರೆಯನ್ನು ಬರೆಯವುದಾಲ್ಲಿ 'ಇವನು ಕಂಟ್ರೋಲ್ ತೆಗೆದು ಹಾಕಿದ' ಎಂದಷ್ಟೇ ಬರೆಯಿರಿ" ಎಂಬುದಾಗಿ ರಾಜಾಜಿ ಒಂದು ಸಲ ಹೇಳಿದ್ದರು.

ತಮಿಳುನಾಡಿನಲ್ಲಿ ಮದ್ಯಪಾನ ಇತ್ತು. ಆದಾಯ ಬರುತ್ತದೆಂಬ ಕಾರಣಕ್ಕಾಗಿ ಮದ್ಯಪಾನವನ್ನು ಜಾರಿಯಲ್ಲಿಡುವುದು ಸರಿಯಲ್ಲವೆಂದು ಭಾವಿಸಿ ರಾಜಾಜಿ ಅದನ್ನು ನಿಲ್ಲಿಸಿದ್ದರು. ಪ್ರತಿಯೊಂದು ವಿಷಯದಲ್ಲೂ ಅವರು ಕುಶಲಮತಿಗಳಾಗಿದ್ದರು. ರಾಜ್ಯ ಸರಕಾರಕ್ಕೆ ನಷ್ಟವಾಗಬಾರದೆಂಬ ಕಾರಣದಿಂದ ಅವರು ಸೇಲ್ಸ್ ಟ್ಯಾಕ್ಸ್ ಜಾರಿಗೆ ತಂದರು. ಮದ್ಯಪಾನ ನಿಷೇಧದಿಂದ ಆಗುತ್ತಿದ್ದ ನಷ್ಟವನ್ನು ಸೇಲ್ಸ್ ಟ್ಯಾಕ್ಸ್‌ನಿಂದ ತುಂಬಿದರು. ಇಂಥ ಬುದ್ಧಿವಂತಿಕೆ ರಾಜಾಜಿ ಅವರದಾಗಿತ್ತು. ಆದರೆ ಸರ್ಕಾರ ಏನು ಮಾಡಿದೆ? ಮದ್ಯಪಾನ ನಿಷೇಧವನ್ನಂತೂ ಜಾರಿಗೆ ತರಲಿಲ್ಲ. ಸೇಲ್‌ಟ್ಯಾಕ್ಸನ್ನು ಸಹ ಜಾರಿಯಲ್ಲಿಟ್ಟಿದೆ. ಅಂದರೆ, ಎರಡು ರೀತಿಯ ಬುದ್ಧಿವಂತಿಕೆ ಆಯಿತು ಮತ್ತು ಎರಡರಷ್ಟು ಆದಾಯವೂ ಬಂತು. ಇದಕ್ಕೆ ಸಂಸ್ಕೃತದಲ್ಲಿ **ಲೋಭಮೂಲಾನಿ ಪಾಪಮೂಲಾನಿ** ಎಂದೆನ್ನುತ್ತಾರೆ. ಆದರೆ ಮದ್ಯಪಾನ ನಿಷೇಧವನ್ನು ರಾಜಾಜಿ ಅತ್ಯಂತ ಅಗತ್ಯವೆಂಬುದಾಗಿ ಭಾವಿಸಿದ್ದರು.

ರಾಜಾಜಿ ದೀರ್ಘಾಯು ಆಗಿದ್ದರು. ಅವರು ತಮ್ಮ ೯೪ನೇ ವರ್ಷದಲ್ಲಿ ತೀರಿಕೊಂಡರು. ಅವರ ಆಹಾರ ಸಾಧಾರಣವಾಗಿರುತ್ತಿತ್ತು. ಸಾಮಾನ್ಯ ಜನರ ಊಟದಂತೆಯೇ ಅವರ ಊಟ ಇದ್ದಿತು. ಸ್ವಲ್ಪ ಕಡಿಮೆ ಊಟ ಮಾಡುತ್ತಿದ್ದರಷ್ಟೆ. ಆಗ ಯಾರೋ ಅವರನ್ನು ಕೇಳಿದರು, "ನೀವು ದೀರ್ಘಾಯುವಾಗಿದ್ದೀರಿ. ನೀವು ಊಟ ಮಾಡುವುದೂ ಕಡಿಮೆ. ಆದರೂ ಕೂಡ ಇಷ್ಟು ಶಕ್ತಿ ಹೇಗೆ ಇದೆ? ಇದಕ್ಕೆ ಕಾರಣವೇನು?" ರಾಜಾಜಿ ಅದಕ್ಕೆ "ಒಂದೇ ಕಾರಣವಿದೆ. ನಾನು ನನ್ನ ರಾಜ್ಯದಲ್ಲಿ ಮದ್ಯಪಾನ ನಿಷೇಧ ಮಾಡಿದ್ದೇನೆ. ಆ ಕಾರಣದಿಂದಾಗಿ ಇಲ್ಲಿಯ ಬಡ ಸಹೋದರಿಯರು ನನಗೆ ಆಶೀರ್ವಾದ ಮಾಡಿದ್ದಾರೆ. ಅವರ ಜೀವನ ಸುಗಮವಾಗಿ ನಡೆಯುತ್ತಿದೆ. ಈಗ ಅವರಿಗೆ ಗಂಡಂದಿರಿಂದ ಏಟು ಬೀಳುತ್ತಿಲ್ಲ. ಮನೆಯಲ್ಲಿ ಸಂತೋಷ ಇದೆ. ಅವರೆಲ್ಲರ ಈ ಆಶೀರ್ವಾದದ ಕಾರಣದಿಂದಾಗಿ ನಾನು ದೀರ್ಘಾಯು ಆಗಿದ್ದೇನೆ" ಎಂದು ಹೇಳಿದರು.

ರಾಜಾಜಿ ಹಿಂದಿಗೆ ವಿರೋಧಿಯಾಗಿದ್ದರೆಂದು ಕೆಲವರು ತಿಳಿದಿದ್ದಾರೆ. ಅವರು ಹಿಂದಿ ಬಗ್ಗೆ ತಮಿಳಿನಲ್ಲಿ ಬರೆದ ಲೇಖನ ಓದಿದ್ದೆ. ಆ ಲೇಖನದಲ್ಲಿ ಅವರು, "ಹಿಂದಿಯನ್ನು ಒತ್ತಾಯಮಾಡಿ ಹೇರುವುದು ತಪ್ಪು: ಆದರೆ ಹಿಂದಿಯನ್ನು ಕಲಿಯದೇ ಇರುವುದು ಮೂರ್ಖತನ" ಎಂದು ಬರೆದಿದ್ದರು. ಎಷ್ಟೊಂದು ಸಮತೋಲನವಾದ ಹೇಳಿಕೆ!

ನಾನು ಸುಮಾರು ಇಡೀ ತಮಿಳ ಸಂತ ಸಾಹಿತ್ಯವನ್ನು ಓದಿದ್ದೇನೆ. ರಾಜಾಜಿಯವರ ಎಲ್ಲ ಪುಸ್ತಕಗಳನ್ನೂ ಓದಿದ್ದೇನೆ. ಚಕ್ರವರ್ತಿ ತಿರುಮಹನ್, ಕಣ್ಣನ್ ಕಾಟ್ಟಿಯವಳಿ, ಭಜಗೋವಿದಂ ಮತ್ತು ಕೊನೆಯದಾಗಿ ತಾವರಂಗಾಳಿನ್ ಇಲ್ಲಮ್

ಅವರು ಬರೆದಿರುವ ಯಾವ ಪುಸ್ತಕವನ್ನೂ ಓದದೆ ಬಿಟ್ಟಿಲ್ಲ. ರಾಜಾಜಿ ಕೊನೆಯವರೆಗೂ ಬರೆದರು. ಮರಣಕ್ಕಿಂತ ಮೊದಲು ಒಂದೆರಡು ವಾರಗಳವರೆಗೂ ಬರೆಯುತ್ತಲೇ ಇದ್ದರು. ಇದೇ ರೀತಿ ನನ್ನ ಕಾಲದ ಮುಖ್ಯ-ಮುಖ್ಯ ನಾಯಕರೆಲ್ಲರೂ ನಿರಂತರ ವಿಚಾರ ಪ್ರಚಾರಕ್ಕಾಗಿ ಕೊನೆಯವರೆಗೂ ಬರೆಯುತ್ತಲೇ ಇದ್ದರು.

ರಾಜಾಜಿಯವರ ಜೀವನಕ್ಕೆ ಇಷ್ಟೆಲ್ಲ ಮುಖಗಳಿವೆ. ಆದರೆ ನನಗೆ ಅತ್ಯಧಿಕ ಆಕರ್ಷಣೆಯಾದದ್ದು ಅವರ ಆಧ್ಯಾತ್ಮಿಕ ಮುಖ. ಅವರು ತಮಿಳಿನಲ್ಲಿ ಬರೆದ ಎಲ್ಲ ಆಧ್ಯಾತ್ಮಿಕ ಸಾಹಿತ್ಯವನ್ನು ಓದಿದ್ದೇನೆ. ನನಗೆ ಅದರಿಂದ ಬಹಳ ಆನಂದವಾಯಿತು. ರಾಜನೀತಿಯ ಬಗ್ಗೆ ಅವರು ಬರೆದಿರುವಂಥದು ಉಳಿಯುವುದಿಲ್ಲ; ಅವರ ಆಧ್ಯಾತ್ಮಿಕ ಸಾಹಿತ್ಯ-ಮುಖ್ಯವಾಗಿ ತಮಿಳಿನಲ್ಲಿ ಬರೆದುದು-ಮಾತ್ರ ಬಹಳ ಕಾಲದವರೆಗೆ ಉಳಿಯುವುದು. ಅವರು ಧರ್ಮ ಮತ್ತು ಆಧ್ಯಾತ್ಮದ ಉತ್ತಮ ಜ್ಞಾನಿಯಾಗಿದ್ದರು; ಅದಕ್ಕಿಂತ ಹೆಚ್ಚಾಗಿ ಮಹಾನ್ ಭಕ್ತರಾಗಿದ್ದರು. ಒಂದು ಬಾರಿ ನಮ್ಮ ಆಶ್ರಮದ ಒಬ್ಬ ಸಹೋದರಿ ಅವರನ್ನು ಭೇಟಿ ಮಾಡಿ ಬ್ರಹ್ಮವಿದ್ಯಾ ಮಂದಿರದ ಪರಿಚಯ ಮಾಡಿಕೊಡುತ್ತಾ ಅಲ್ಲಿ ಹೆಣ್ಣು ಮಕ್ಕಳು ಬ್ರಹ್ಮವಿದ್ಯೆ ಇತ್ಯಾದಿಗಳ ಅಧ್ಯಯನ ಮಾಡುತ್ತಾರೆಂಬುದಾಗಿ ಅವರಿಗೆ ತಿಳಿಸಿದರು. ಆಗ ಅವರು "ಆ ತಾರ್ಕಿಕ ತತ್ವಜ್ಞಾನದಲ್ಲಿ ಬೀಳುವ ಅಗತ್ಯವೇನಿದೆ? ಹೆಣ್ಣು ಮಕ್ಕಳು ಎರಡು ಕೆಲಸ ಮಾಡಲಿ, ಒಂದು ಬೇಸಾಯ, ಇನ್ನೊಂದು ಭಕ್ತಿ."

ರಾಜಾಜಿಯವರು ಒಮ್ಮೆ ಕಾಯಿಲೆಯಿಂದ ಇದ್ದರು. ಆಗ ಸುಬ್ಬುಲಕ್ಷ್ಮೀಯವರು ಅವರ ಬಳಿ ಕುಳಿತು ವಿಷ್ಣು ಸಹಸ್ರನಾಮ ಹೇಳಿದರು. ಅಂತಿಮ ಕಾಲದಲ್ಲಿ ರೋಗಿಗೆ ಔಷಧ ಕುಡಿಸುವ ಬದಲು ವಿಷ್ಣುಸಹಸ್ರನಾಮದ ಸ್ಮರಣೆಯಿಂದ ಬಹಳ ಶಾಂತಿಪೂರ್ವಕವಾಗಿ ದೇವರ ಬಳಿಸಾರುವನು. ವಿಷ್ಣುಸಹಸ್ರನಾಮದ ಕೊನೆಯ ಶ್ಲೋಕ ಹೀಗಿದೆ:-

ಶಂಖಭೃತ್-ನಂದಕಿ ಚಕ್ರೀ ಶಾಂರ್ಗಧನ್ವಾ ಗದಾಧರಃ।
ರಥಾಂಗಪಾಣಿರಕ್ಷೋಭ್ಯ: ಸರ್ವಪ್ರಹರಣಾಯುಧಃ।

ರಾಜಾಜಿಯವರು ಇದನ್ನು ಒಂದು ಲೇಖನದಲ್ಲಿ ಉಲ್ಲೇಖ ಮಾಡಿದ್ದರು. ಅದರಲ್ಲಿ ಅವರು **ರಥಾಂಗಪಾಣಿಯ** ಅರ್ಥವನ್ನು ಭಕ್ತನ ರಥವು ಭೂಮಿಯ ಮೇಲೆ ಒಳ್ಳೆಯ ರೀತಿಯಲ್ಲಿ ಓಡುವಂತೆ ಮಾಡುವವನು ಎಂದು ವ್ಯಾಖ್ಯೆ ಮಾಡಿದ್ದಾರೆ. ರಾಜಾಜಿ ರಾಮಾಯಣವನ್ನು ಬರೆದಿದ್ದಾರೆ. ಅದರ ಹೆಸರು 'ಚಕ್ರವರ್ತಿ ತಿರುಮಹನ್', ಅಂದರೆ, ಚಕ್ರವರ್ತಿಯ ಶ್ರೀಪುತ್ರ, ಅಂದರೆ, ರಾಮ. ಚಕ್ರವರ್ತಿ ರಾಮ ಜೀವಂತವಾಗಿದ್ದಾನೆ, ಚಕ್ರವರ್ತಿ ರಾಜಗೋಪಾಲಾಚಾರಿ ಹೋದರು, ರಾಮನಲ್ಲಿ ವಿಲೀನವಾದರು. ಇಂಥ ಮಹಾನ್‌ರು ಹೋದಾಗ ನನ್ನ ಮನಸ್ಸಿನ ಮೇಲೆ ಬಹಳ ಪರಿಣಾಮ ಉಂಟಾಗುತ್ತದೆ.

ರಾಜಾಜಿ ವೃದ್ಧರಾಗಿದ್ದರು, ಕಾಯಿಲೆಯಿಂದಿದ್ದರು. ಅವರ ಮರಣವಾಯಿತು. ಅಂದರೆ ಅವರ ಮುಕ್ತಿಯಾಯಿತು. ಅದು ಶೋಚನೀಯ ಘಟನೆಯಲ್ಲ. ಆದ್ದರಿಂದ ರಾಜಾಜಿಯವರ ಮರಣದ ಬಗ್ಗೆ, "ರಾಜಾರಾಮನಿದ್ದಾನೆ, ರಾಜಾಜಿ ಹೋದರು" ಎಂಬುದಾಗಿ ನಾನು ಹೇಳಿದ್ದೆ.

(ಸಾಭಾರ: 'ಮೈತ್ರಿ' : ಅನು- ಸು.ಕೌ)

* * *

'ಆರ್ಥಿಕ ಪಾತಕಿ'ಯೋರ್ವನ ತಪ್ಪೊಪ್ಪಿಗೆ

– ಜಾನ್ ಪರ್ಕಿನ್ಸ್

"ಆರ್ಥಿಕ ಪಾತಕಿಗಳು ವಿಶ್ವದಾದ್ಯಂತ ವಿವಿಧ ದೇಶಗಳನ್ನು ಅರ್ಬುದಗಟ್ಟಲೆ ಡಾಲರ್‌ಗಳ ವಂಚನೆ ಮಾಡುವ, ಊಹಿಸಲಾಗದಷ್ಟು ದುಬಾರಿ ವೇತನ ಪಡೆಯುವ ವೃತ್ತಿನಿರತರು. ವಿಶ್ವಬ್ಯಾಂಕ್, ಅಮೇರಿಕ ಸರಕಾರ ಮತ್ತು ವಿದೇಶಿ ಆರ್ಥಿಕ 'ನೆರವು' ನೀಡುವ ಅಪಾರ ಹಣವನ್ನು ಅವರು ಅಂತರರಾಷ್ಟ್ರೀಯ ವ್ಯಾಪಾರೋದ್ಯಮ ಸಂಸ್ಥೆಗಳ ಬೊಕ್ಕಸಗಳಿಗೂ ಮತ್ತು ವಿಶ್ವದ ಪ್ರಾಕೃತಿಕ ಸಂಪನ್ಮೂಲಗಳನ್ನು ತಮ್ಮ ನಿಯಂತ್ರಣದಲ್ಲಿರಿಸಿಕೊಂಡಿರುವ ಶ್ರೀಮಂತ ಪರಿವಾರಗಳ ಜೇಬುಗಳಿಗೂ ಹರಿದು ಬರುವಂತೆ ಮಾಡುತ್ತಾರೆ. ವಂಚನೆಯಿಂದ ಕೂಡಿರುವ ಹಣಕಾಸು ವರದಿಗಳು, ಮೋಸದ ಚುನಾವಣೆಗಳು ಲಂಚ ಅನ್ಯಾಯದ ಸುಲಿಗೆ ಮತ್ತು ಕೊಲೆ – ಇವು ಅವರು ಬಳಸುವ ಸಾಧನಗಳು. ಹಿಂದೆ ಸಾರ್ವಭೌಮ ಚಕ್ರಾಧಿಪತ್ಯಗಳು ನಡೆಸುತ್ತಿದ್ದಂಥದೇ ವಹಿವಾಟು ನಡೆಸುವ ಇವರು, ಇದೀಗ ಜಾಗತೀಕರಣದ ಕಾಲಾವಧಿಯಲ್ಲಿ ಆರಂಭಿಸಿರುವ ಹೊಸ ಬಗೆಯ ಆಟದ ಆಯಾಮಗಳು ಭಯಾನಕ ಹಂತವನ್ನು ತಲುಪಿವೆ. ಇದೆನ್ನೆಲ್ಲ ನಾನೇ ನೇರ ಕಂಡಿದ್ದೇನೆ ಏಕೆಂದರೆ ಅಂತಹವರಲ್ಲಿ ನಾನೂ ಒಬ್ಬನಾಗಿದ್ದೆ!"

ಅಂತಾರಾಷ್ಟ್ರೀಯ ಸ್ತರದ ಪಿತೂರಿ ಮತ್ತು ಭ್ರಷ್ಟಾಚಾರ ಕುರಿತ ವಾಸ್ತವಿಕ ಮಾಹಿತಿಗಳನ್ನು ಒಳಗೊಂಡಿರುವ ಒಂದು ಅಸಾಮಾನ್ಯ ಗ್ರಂಥ ಇದು. ಇರಾನಿನ ಶಹಾನ ಪತನ (೧೯೭೯), ಪನಾಮಾದ ರಾಷ್ಟ್ರಾಧ್ಯಕ್ಷ ಓಮರ್ ಟೋರಿಜೋಸ್‌ನ ಕೊಲೆ (ಜುಲೈ–೧೯೮೧), ಪನಾಮಾ ಮತ್ತು ಇರಾಕ್ ಮೇಲೆ ಸೈನಿಕ ಆಕ್ರಮಣಗಳು (ಡಿಸೆಂಬರ್–೧೯೮೯ ಮತ್ತು ಮಾರ್ಚ್–೨೦೦೩) ಮೊದಲಾದ ಅಂತರಾಷ್ಟ್ರೀಯ ಮಹತ್ವದ ಘಟನೆಗಳ ಹಿಂದಿದ್ದ ಸಾಮ್ರಾಜ್ಯವಾದಿ ನಿಯಂತ್ರಕರ ರಹಸ್ಯ ಕಾರಾಸ್ಥಾನಗಳು, ಒಸಮಾ ಬಿನ್ ಲಾಡೆನ್‌ನಿಗೆ ನಿಧಿ ಒದಗಿಸುತ್ತಿದ್ದುದನ್ನೂ ಒಳಗೊಂಡು ಅಮೆರಿಕ ಮತ್ತು ಸೌದಿ ಅರೇಬಿಯ ಆಡಳಿತಗಳ ಭ್ರಷ್ಟ ಸಂಬಂಧಗಳ ಒಳನೋಟ ಇವೆಲ್ಲವನ್ನೂ ಈ ಗ್ರಂಥವು ಬೆಳಕಿಗೆ ತಂದಿದೆ.

ತಾನು ಸ್ವತಃ ಅಂತಹ ಓರ್ವ 'ಆರ್ಥಿಕ ಪಾತಕಿಯಾಗಿದ್ದಾಗ ನಡೆದಿದ್ದ ಕೃತ್ಯಗಳ ಅನುಭವಗಳನ್ನು ಹೇಳಿಕೊಂಡಿರುವ ಗ್ರಂಥಕರ್ತನ ಆತ್ಮಕಥೆಯಂತಿರುವ ಪುಸ್ತಕ ಇದು.

ಇದರಲ್ಲಿರುವ ಪ್ರಸಂಗಗಳು ಅದೆಷ್ಟು ನಾಟಕೀಯ ಹಾಗೂ ಮನಸ್ಸನ್ನು ಸೆರೆಹಿಡಿಯುವಂತಹವಾಗಿವೆಯೆಂದರೆ, ಒಂದು ಕಾಲ್ಪನಿಕ ಕಾದಂಬರಿಯಂತೆಯೂ ಭಾರೀ ಬೇಡಿಕೆಯ ಪುಸ್ತಕ ಇದಾಗುವ ಸಾಧ್ಯತೆಯಿತ್ತು; ಆದರೆ ಇದರಲ್ಲಿರುವ ಪ್ರಸಂಗಗಳೆಲ್ಲ ಕಾಲ್ಪನಿಕವಾಗಿರದೆ, ಕಠೋರ ವಾಸ್ತವಿಕ ಸಂಗತಿಗಳಾಗಿವೆ. ಹೀಗಾಗಿ ಅವನ್ನು ಓದಿದರೆ ನಿಮ್ಮ ಹೊಟ್ಟೆ ತೊಳಸಿದಂತಾಗುವುದು ನಿಶ್ಚಿತ.

ಬಂಡವಾಳವಾದಿ – ಸಾಮ್ರಾಜ್ಯಶಾಹಿ ಶಕ್ತಿಗಳು ನಡೆಸುತ್ತಾ ಬಂದಿರುವ ಈ ನೀಚ ಕಾರಸ್ಥಾನಗಳ ಅರಿವಿನಿಂದಾಗಿ ನಿಮ್ಮ ಹೃದಯ ಚಿಂತೆ ಮತ್ತು ಭಯದಿಂದ ತಲ್ಲಣಗೊಳ್ಳುವುದು ಸ್ವಾಭಾವಿಕ. ಆದರೆ ಇಂತಹ ಪರಿಸ್ಥಿತಿಯನ್ನು

ಬದಲಿಸಬೇಕಾಗಿರುವವರು ನಾವು ಎಂಬ ಹೊಣೆಗಾರಿಕೆಯ ಅರಿವು ಸಹ ನಿಮ್ಮ ಮನದಲ್ಲಿ ಎಚ್ಚರಗೊಳ್ಳುವುದೆ? - ಇದು ಮಿಲಿಯನ್ ಡಾಲರ್ ಪ್ರಶ್ನೆ.

ಒಂದು ಅಂತರರಾಷ್ಟ್ರೀಯ ಸಲಹೆಗಾರ ಸಂಸ್ಥೆಯ ಓರ್ವ ಅಧಿಕಾರಿಯಾಗಿ, ವಿವಿಧ ಹಿಂದುಳಿದ ದೇಶಗಳಿಗೆ ತಮ್ಮ ಮೂಲಭೂತ ಸೌಕರ್ಯಗಳ ಆರ್ಥಿಕ ಒಳಹಂದರದ ಅಭಿವೃದ್ಧಿಗಾಗಿ ಅಗಾಧ ಪ್ರಮಾಣದ ಸಾಲ ಪಡೆಯುವಂತೆ ಅಲ್ಲಿನ ಸರಕಾರಗಳನ್ನು ಒತ್ತಾಯಿಸಿ ಒಪ್ಪಿಸುವಂತಹ ಕೆಲಸ ತಾನು ಮಾಡುತ್ತಿದ್ದಾಗಿನ ರೋಚಕ ಅನುಭವಗಳನ್ನು ಗ್ರಂಥಕರ್ತ ಜಾನ್ ಪರ್ಕಿನ್ಸ್ ಇದರಲ್ಲಿ ಹೇಳಿದ್ದಾರೆ. ಆ ರಾಷ್ಟ್ರಗಳಿಗೆ ಅವರು ಸೂಚಿಸುತ್ತಿದ್ದ ಸಾಲ ಅದೆಷ್ಟು ದೊಡ್ಡ ಪ್ರಮಾಣದ್ದಾಗಿ ಇರುತ್ತಿತ್ತೆಂದರೆ, ಅದು ಅವುಗಳ ನೈಜ ಅಗತ್ಯಕ್ಕೆ ಮೀರಿ ಅದರ ಮರುಪಾವತಿ ಮುಂದೆ ಎಂದೆಂದಿಗೂ ಅವುಗಳಿಗೆ ಸಾಧ್ಯವೇ ಆಗಬಾರದು ಎನ್ನುವಷ್ಟು ಪ್ರಮಾಣದಲ್ಲಿ ಇರುತ್ತಿತ್ತು. ಈ ಸಾಲ-ಹಣದ ಗಣನೀಯ ಪಾಲು ನಿಜಕ್ಕೂ ಅದರ ಅಗತ್ಯವಿರುವ ಅಲ್ಲಿನ ಜನಸಾಮಾನ್ಯರಿಗೆ ದಕ್ಕದೆ, ಆ ದೇಶಗಳಲ್ಲಿನ ನಾಯಕರ ಜೇಬು ಸೇರುತ್ತಿತ್ತೆಂಬುದನ್ನು ಬೇರೆ ಹೇಳುವ ಅಗತ್ಯವಿಲ್ಲ.

ಇದರ ಮುಂದಿನ ಹೆಜ್ಜೆಯಾಗಿ, ಪರ್ಕಿನ್ಸ್ ಮತ್ತು ಅವರ ಸಹಕಾರಿಗಳು ಆ ದೇಶಗಳಲ್ಲಿನ ಅಭಿವೃದ್ಧಿಪರ ಕೆಲಸಗಳ ಗುತ್ತಿಗೆ ಅಮೇರಿಕದಲ್ಲಿನ ಬಹುರಾಷ್ಟ್ರೀಯ ಕಂಪನಿಗಳಿಗೇ ಸಿಗುವಂತೆ ಮಾಡುತ್ತಿದ್ದರು. ಇಂತಹ ದೇಶಗಳು ಈ ವಿಧದ ಭಾರೀ ಸಾಲದ ಬಲೆಯಲ್ಲಿ ಒಮ್ಮೆ ಸಿಲುಕಿಕೊಂಡಲ್ಲಿ ಮುಂದೆ ಅಮೇರಿಕದ ಸರಕಾರ ಮತ್ತು ಅದರ ಜೊತೆ ನಂಟು ಹೊಂದಿರುವ ಅಂತರರಾಷ್ಟ್ರೀಯ ನೆರವು ನೀಡಿಕೆಸಂಸ್ಥೆಗಳು ಅವುಗಳಿಗೆ ಮರುಪಾವತಿಯ ಹಲವಾರು ಶರತ್ತುಗಳನ್ನು ವಿಧಿಸುವುದರ ಮೂಲಕ ಅವುಗಳ ಆರ್ಥಿಕತೆಯ ಮೇಲೆ ತಮ್ಮ ಪೂರಾ ಬಿಗಿಮುಷ್ಟಿಯನ್ನು ಸಾಧಿಸುತ್ತವೆ. ಹೆಚ್ಚುಕಡಿಮೆ ಸಾಲದ 'ತಿಮಿಂಗಿಲ'ಗಳೇ ಆಗಿ ಅವು ಕೆಲಸ ಮಾಡಲಾರಂಭಿಸುತ್ತವೆ. ತನ್ನ ಸಾಲದ ಹಂಗಿಗೆ ಒಳಗಾದ ಮೇಲೆ ಅಮೆರಿಕಕ್ಕೆ ಆ ದೇಶಗಳ ಪ್ರಾಕೃತಿಕ ಸಂಪನ್ಮೂಲಗಳು, ಮಾರುಕಟ್ಟೆ, ಸೈನಿಕ ತಾಣಗಳು ಮತ್ತು ವಿಶ್ವಸಂಸ್ಥೆಯಲ್ಲಿ ಅವುಗಳ ಮತಗಳು-ಇವೆಲ್ಲವನ್ನೂ ತನ್ನದೇ ಅಂಕೆಯಲ್ಲಿರಿಸಿಕೊಳ್ಳುವುದು ಸುಲಭವಾಗುತ್ತದೆ. ಈ ಗ್ರಂಥವನ್ನು ಬರೆದು ಪ್ರಕಟಿಸಲು ಕಳೆದ ಎರಡು ದಶಕಗಳ ಕಾಲ ತಾನು ಅದೆಷ್ಟು ರೀತಿಯಲ್ಲಿ ಪ್ರಯತ್ನಿಸಿದ್ದೆ ಹಾಗೂ ಈ ನಿಟ್ಟಿನಲ್ಲಿ ತಾನು ಮುಂದುವರಿಯದಂತೆ ಪ್ರತಿ ಬಾರಿ ಲಂಚದ ಆಮಿಷವನ್ನೋ, ಬೆದರಿಕೆಯನ್ನೋ ಒಡ್ಡಿ ತನ್ನನ್ನು ಹೇಗೆ ತಡೆಯಲಾಗುತ್ತಿತ್ತು ಎಂಬುದನ್ನು ಪರ್ಕಿನ್ಸ್ ವಿವರಿಸಿದ್ದಾರೆ. ಆದರೆ ಮುಂದೆ ವಿಶೇಷವಾಗಿ ೯/೧೧ರ ಘಟನೆಯ ಮತ್ತು ಇರಾಕ್ ಸಮರದ ನಂತರ - "ನನ್ನ ಕಿರಿಮಗಳಿಗೆ ನಾನು ಬದುಕಲು ಸಾಧ್ಯವಿಲ್ಲದ ಅದೆಂತಹ ರೀತಿಯ ದೌಷ್ಟ್ಯಮಯ ಜಗತ್ತನ್ನು ಬಿಟ್ಟುಹೋಗುತ್ತಿರುವೆ" ಎಂಬ ತಳಮಳ ತನ್ನಲ್ಲಿ ಮೂಡಿದಾಗ, ತನ್ನ ಬದುಕಿನ ಅನುಭವದ ಇಂತಹ ಸಂಗತಿಯನ್ನು ಬಯಲಿಗೆಳೆಯುವುದು ತನ್ನದೇ ಜವಾಬ್ದಾರಿ ಎಂದು ತನಗನಿಸಿತು, ಹೀಗಾಗಿ ಈ ವಿವರಗಳನ್ನು ಸಾರ್ವಜನಿಕರೊಂದಿಗೆ ಹಂಚಿಕೊಳ್ಳಲು ತಾನು ನಿರ್ಧರಿಸಿದೆ ಎಂದು ಹೇಳಿದ್ದಾರೆ. ಗ್ರಂಥದ ಬರವಣಿಗೆಗೆ ತನಗೇನು ಪ್ರೇರಣೆಯೆಂಬುದನ್ನು ವಿವರಿಸುತ್ತ, " ಯಾವುದೇ ಸಮಸ್ಯೆಯ ಪರಿಹಾರದಲ್ಲಿ ಅಂತಹ ಸಮಸ್ಯೆಯೊಂದಿದೆ ಎಂದು ಸ್ಪಷ್ಟವಾಗಿ ಒಪ್ಪಿಕೊಳ್ಳುವುದೇ ಮೊದಲ ಹೆಜ್ಜೆ. ಪಾಪವೊಂದರ ಪರಿಮಾರ್ಜನೆ ಅದರ ತಪ್ಪೊಪ್ಪಿಗೆಯಿಂದಲೇ ಆರಂಭವಾಗುತ್ತದೆ. ಹೀಗಾಗಿ ನಮ್ಮ ವಿಮುಕ್ತಿಯೂ ಈ ಗ್ರಂಥದಿಂದಲೇ ಆರಂಭವಾಗಲಿ"

ಎಂದಿದ್ದಾರೆ ಅವರು.
೧. ಅಮೆರಿಕದ ಸರಕಾರ
೨. ವಿಶ್ವಬ್ಯಾಂಕ್, ಅಂತರರಾಷ್ಟ್ರೀಯ ವಿತ್ತ ನಿಧಿ (ಇಂಟರ್ ನ್ಯಾಷನಲ್ ಮಾನಿಟರಿ ಫಂಡ್ – ಐ.ಎಂ.ಎಫ್) ಮೊದಲಾದ ಬ್ಯಾಂಕಿಂಗ್ ಸಂಸ್ಥೆಗಳು
೩. ಮೊನ್ಸಾಂಟೋ, ಜನರಲ್ ಇಲೆಕ್ಟ್ರಿಕ್, ಜನರಲ್ ಮೋಟಾರ್ಸ್, ವಾಲ್ಮಾರ್ಟ್ ಮತ್ತು ಸುಮಾರಾಗಿ ವಿಶ್ವದ ಎಲ್ಲ ಬೃಹತ್ ಉದ್ಯಮಗಳು

ಈ 'ದುಷ್ಟಕೂಟ'ವನ್ನು ಪರ್ಕಿನ್ಸ್ 'ಉದ್ಯಮಶಾಹಿ', 'ಕಾರ್ಪೊರೇಟೋಕ್ರಸಿ' ಎಂದು ಹೆಸರಿಸಿದ್ದಾರೆ.

ಈ 'ಉದ್ಯಮಶಾಹಿ'ಯು ಹಳೆಯ ಸಾಮ್ರಾಜ್ಯವಾದದ್ದೇ ನವಿರಾದ, ಆದರೆ ಇನ್ನೂ ನೀಚವಾದ ರೂಪ – ಎನ್ನುತ್ತಾರೆ ಪರ್ಕಿನ್ಸ್.

ದ್ವಿತೀಯ ವಿಶ್ವಸಮರದ ನಂತರ ಉದಯವಾದ ಸೋವಿಯತ್ ರಷ್ಯ ಒಕ್ಕೂಟ ಮತ್ತು ಹೆಚ್ಚಿದ ಅಣುಶಸ್ತ್ರಗಳು – ಇವುಗಳ ಹಿನ್ನೆಲೆಯಲ್ಲಿ ಸೈನಿಕ ಶಕ್ತಿಯನ್ನು ಆಧರಿಸಿದ ಸಾಮ್ರಾಜ್ಯ ವಿಸ್ತರಣೆ ಈಗ ಸುಲಭವಾಗಿರಲಿಲ್ಲ. ೧೯೫೧ರಲ್ಲಿ ಬ್ರಿಟಿಷ್ ಪೆಟ್ರೋಲಿಯಂ ವಿರುದ್ಧ ಇರಾನ್ ಬಂಡು ಹೂಡಿತು. ಇರಾನಿನಲ್ಲಿ ಪ್ರಜಾತಾಂತ್ರಿಕವಾಗಿ ಚುನಾಯಿತನಾದ ಪ್ರಧಾನಿ ಮಹಮದ್ ಮೊಸಾದೆಕ್ ಪೆಟ್ರೋಲಿಯಂ ಸ್ವತ್ತುಗಳೆಲ್ಲವನ್ನೂ ರಾಷ್ಟ್ರೀಕರಿಸಿದ. ಇದರಿಂದಾಗಿ ಅಮೆರಿಕ ಇಂಗ್ಲೆಂಡ್‌ನಂತಹ ಉಪಭೋಗವಾದಿ ಪಾಶ್ಚಾತ್ಯ ರಾಷ್ಟ್ರಗಳು ದುಬಾರಿಯಾದ ಅನನುಕೂಲತೆಗೊಳಗಾದವು. ಆದರೆ ಪ್ರಬಲ ಶಕ್ತಿಶಾಲಿ ರಷ್ಯಕ್ಕೆ ಇರಾನ್ ಸಮೀಪವೇ ಇದ್ದ ಕಾರಣದಿಂದಾಗಿ ಅದರ ವಿರುದ್ಧ ಅವು ಯುದ್ಧ ಹೂಡದಾದವು. ಅದಕ್ಕಾಗಿ ಅಮೆರಿಕವು ಕೆರ್ಮಿಟ್ ರೂಸ್‌ವೆಲ್ಟ್ (ಹಿಂದಿನ ರಾಷ್ಟಾಧ್ಯಕ್ಷ ಥಿಯೋಡೋರ್ ರೂಸ್‌ವೆಲ್ಟ್‌ನ ಮೊಮ್ಮಗ) ಎಂಬ ಸಿ.ಐ.ಎ ಯ (ಅಮೆರಿಕದ 'ಸೆಂಟ್ರಲ್ ಇಂಟೆಲಿಜೆನ್ಸ್ ಏಜೆನ್ಸಿ' – ಗುಪ್ತಚರ ಸಂಸ್ಥೆ) ಏಜಂಟನನ್ನು ಇರಾನಿಗೆ ಕಳುಹಿಸಿತು. ಆತ ಲಂಚ ಮತ್ತು ಬೆದರಿಕೆಯೊಡ್ಡುವ ಮೂಲಕ ಅನೇಕರನ್ನು ತನ್ನ ಬುಟ್ಟಿಗೆ ಹಾಕಿಕೊಂಡು, ಬೀದಿ ದಂಗೆಗಳನ್ನು ಮತ್ತು ಹಿಂಸಾತ್ಮಕ ಪ್ರದರ್ಶನಗಳನ್ನು ಸಂಘಟಿಸಿ ಮೊಸಾದೆಕ್ ಓರ್ವ ಅಯೋಗ್ಯ ಹಾಗೂ ಜನರಿಗೆ ಬೇಡದವನು ಎಂಬಂತಹ ವಾತಾವರಣ ಸೃಷ್ಟಿಸುವುದರಲ್ಲಿ ತನ್ನ ಚಾಕಚಕ್ಯತೆಯನ್ನು ಮೆರೆದ ಪರಿಣಾಮವಾಗಿ ಮೊಸಾದೆಕ್‌ನ ಪತನವಾಯಿತು. ಅವನ ಬದಲಿಗೆ ಅಮೆರಿಕದ ಪರವಾಗಿದ್ದ ಶಾಹ ಮಹಮದ್ ರೇಜಾ ಪಹ್ಲವಿ ಪ್ರಶ್ನಾತೀತ ಸರ್ವಾಧಿಕಾರಿಯಾಗಿ ಮುಂದೆ ಬಂದ. ಹೀಗೆ ಪರಮಾಣು ಸಮರದ ಅಗತ್ಯವೇ ಇಲ್ಲದೆ ಸೋವಿಯತ್ ರಷ್ಯವನ್ನು ನಿಷ್ಪ್ರಭಗೊಳಿಸುವಂತಹ ಏಕಮಾತ್ರ ಹೊಸ ಉದ್ಯಮವೊಂದನ್ನು ಈ ಮೂಲಕ ಕೆರ್ಮಿಟ್ ರೂಸ್‌ವೆಲ್ಟ್ ಹುಟ್ಟುಹಾಕಿದ.

ಈ ಯೋಜನೆ ಸೊಗಸಾಗಿ ಕೆಲಸ ಮಾಡಿತು. ಆದರೂ ಈಗ ಸಣ್ಣದೊಂದು ಸಮಸ್ಯೆಯೂ ಇತ್ತು. ಕೆರ್ಮಿಟ್ ಓರ್ವ ಸಿ.ಐ.ಎ ಏಜೆಂಟ್ ಆಗಿದ್ದ. ಅವನ ಹಿನ್ನೆಲೆಯೇನಾದರೂ ಬೆಳಕಿಗೆ ಬಂದಿದ್ದಲ್ಲಿ ಭಾರೀ ಅನಾಹುತಕಾರಿ ಪರಿಣಾಮವಾಗುವ ಸಂಭವವಿತ್ತು. ಒಂದು ವಿದೇಶಿ ವಿಧ್ಯುಕ್ತ ಸರಕಾರವನ್ನು ಉರುಳಿಸುವಂತಹ ಅಮೆರಿಕದ ಮೊಟ್ಟಮೊದಲ ಕಾರ್ಯಾಚರಣೆಯನ್ನು ಆತ ಸಂಯೋಜಿಸಿದ್ದ. ಮುಂದೆ ಇಂತಹ ಇನ್ನೂ ಅನೇಕ ಕಾರ್ಯಾಚರಣೆಗಳು ವಿವಿಧೆಡೆಗಳಲ್ಲಿ ಅನುಸರಿಸಲ್ಪಟ್ಟವು. ಆದರೆ ಅಮೆರಿಕದ ಸರಕಾರವನ್ನೇ ನೇರವಾಗಿ ಆಪಾದಿಸಲಾಗದಂತಹ ಕಾರ್ಯವಿಧಾನವೊಂದನ್ನು ಅದಕ್ಕೆ

ಪೂರ್ವಭಾವಿಯಾಗಿ ವಿಕಾಸಗೊಳಿಸಬೇಕಾಗಿದ್ದುದೂ ಮಹತ್ವದ್ದಾಗಿತ್ತು. ಅದಕ್ಕಾಗಿ ಬಹುರಾಷ್ಟ್ರೀಯ ಕಂಪನಿಗಳ ಅಧಿಕಾರಿಗಳಾಗಿರುವಂತಹ 'ಆರ್ಥಿಕ ಪಾತಕಿ'ಗಳ ಯೋಜನೆ ಮಾಡಲಾಗಿತ್ತು. ಅವರು ಯಾವುದೇ ವಿಧದಲ್ಲೂ ಸಾರ್ವಜನಿಕರ ಲಕ್ಷ್ಯಕ್ಕೆ ಬರದಂತಹವರು ಮತ್ತು ಟ್ರೇಡ್‌ಮಾರ್ಕ್, ಅಂತರರಾಷ್ಟ್ರೀಯ ವಾಣಿಜ್ಯ ಮತ್ತು ಮಾಹಿತಿ ಸಂಬಂಧಿತ ಕಾನೂನುಗಳನ್ನು ಒಳಗೊಂಡು ಕಾನೂನು ಕ್ರಮಗಳಿಂದ ಸುರಕ್ಷಿತರಾಗಿರುವವರು ಆಗಿರುವಂತೆ ನೋಡಿಕೊಳ್ಳಲಾಯಿತು.

ಈ ಉದ್ಯಮಶಾಹಿಯ ವ್ಯವಸ್ಥೆಯಲ್ಲಿ ಅಮೆರಿಕ ಮತ್ತು ವಿಶ್ವನಾಯಕರು ಹೇಗೆ ದಾಳಗಳಾಗಿದ್ದಾರೆ (ಅಥವಾ ತಾವೇ ಆಟಗಾರರೆ?) ಎಂಬುದನ್ನು ಪರ್ಕಿನ್ಸ್ ವಿವರಿಸಿದ್ದಾರೆ. ಉದಾಹರಣೆಗಾಗಿ

೧. ೧೯೬೧ರ ವರೆಗೆ ಫೋರ್ಡ್ ಮೋಟಾರ್ಸ್‌ನ ಅಧ್ಯಕ್ಷನಾಗಿದ್ದ ರಾಬರ್ಟ್ ಮೆಕ್ ನಮಾರ ಮುಂದೆ ೧೯೬೧-೬೮ರ ಕಾಲಾವಧಿಯಲ್ಲಿ ಅಮೆರಿಕದ ರಕ್ಷಣಾ ಕಾರ್ಯದರ್ಶಿಯಾಗಿ ಅನಂತರ ವಿಶ್ವಬ್ಯಾಂಕ್‌ನ ಅಧ್ಯಕ್ಷನೂ ಆದ.

೨. ಜಾರ್ಜ್ ವಿಲಿಯಂ ಬುಷ್ (ದ್ವಿತೀಯ) ೧೯೭೭ರಲ್ಲಿ ಟೆಕ್ಸಾಸ್‌ನಲ್ಲಿ 'ಆರ್ಬುಸ್ಟೊ' (ಸ್ಪ್ಯಾನಿಷ್ ಭಾಷೆಯಲ್ಲಿ 'ಬುಷ್' 'ಪೊದೆ' ಎಂಬರ್ಥಕೊಡುವ ಪದ) ಎಂಬ ಒಂದು ಊರ್ಜಾ (ಎನರ್ಜಿ) ಕಂಪನಿಯನ್ನು ಆರಂಭಿಸಿದ. ಅದು ಪೂರಾ ವಿಫಲಗೊಂಡಿದ್ದರಿಂದಾಗಿ ೧೯೮೪ರಲ್ಲಿ ಅದನ್ನು 'ಸ್ಪೆಕ್ಟ್ರಮ್-೭' ಎಂಬ ಬೇರೊಂದು ಕಂಪನಿಯಲ್ಲಿ ವಿಲೀನಗೊಳಿಸಿದ. (ಗೊತ್ತಿರಲಿ ; ಆಗ ಅವನ ತಂದೆ ಬುಷ್ (ಒಂದನೆಯ) ಉಪಾಧ್ಯಕ್ಷನಾಗಿದ್ದ). ಈ ಕಂಪನಿಯೂ ದೀವಾಳಿಯಾದಾಗ ಅದನ್ನು 'ಹಾರ್ಕೆನ್ ಎನರ್ಜಿ' ಎಂಬ ಮತ್ತೊಂದು ಕಂಪನಿಯು ಖರೀದಿಸಿತು. ಆಗಲೂ ಉಪರಾಷ್ಟ್ರಾಧ್ಯಕ್ಷನಾಗಿದ್ದ ಹಿರಿಯ ಬುಷ್, ಕಿರಿಯ ಬುಷ್‌ನನ್ನು ಈ ಹೊಸ ಕಂಪನಿಯ ಮಂಡಲಿಯ ಸದಸ್ಯನನ್ನಾಗಿ ಉಳಿಸಿ, ವಾರ್ಷಿಕ ೧,೨೦,೦೦೦ ಡಾಲರ್‌ಗಳ ವೇತನಸಹಿತ ಸಲಹಾಕಾರನನ್ನಾಗಿ ಮಾಡಲಾಯಿತು.೧೯೮೮ರಲ್ಲಿ ಹಿರಿಯ ಬುಷ್ ಅಮೆರಿಕದ ರಾಷ್ಟ್ರಾಧ್ಯಕ್ಷನಾಗಿ ಆಯ್ಕೆಯಾದ. ೧೯೯೦ರ ಜನವರಿಯಲ್ಲಿ 'ಹಾರ್ಕೆನ್ ಎನರ್ಜಿ'ಗೆ ಬಹರಿನ್‌ನ ಕರಾವಳಿ ಪ್ರದೇಶದಲ್ಲಿ ಕಚ್ಚಾ ತೈಲ ನಿಕ್ಷೇಪ ಶೋಧನೆಗಾಗಿ ಗುತ್ತಿಗೆ ದೊರೆಯಿತು. ಆದರೆ ಅಮೆರಿಕದ ಹೊರಗೆ ಎಲ್ಲೂ ಕೆಲಸ ಮಾಡಿದ ಮತ್ತು ಕರಾವಳಿಯಲ್ಲಿ ತೈಲಶೋಧನೆಯದಂತೂ ಅನುಭವವೇ ಇರದ ಹಿನ್ನೆಲೆಯಲ್ಲಿ ಹಾರ್ಕೆನ್‌ಗೆ ಈ ಗುತ್ತಿಗೆ ದೊರೆತದು ಕಂಪನಿಯ ಒಳಗಿನವರಿಗೂ ಅತ್ಯಾಶ್ಚರ್ಯಕರ ಎನಿಸಿತು. ಅಂತೂ ಕೆಲವೇ ವಾರಗಳಲ್ಲಿ ಹಾರ್ಕೆನ್ ಸ್ಟಾಕ್‌ಗಳ ಬೆಲೆ ಷೇರ್ ಒಂದಕ್ಕೆ ೪.೫೦ ಡಾಲರ್‌ನಿಂದ ೫.೫೦ಕ್ಕೆ ಎಂದರೆ ಶೇ. ೨೦ರಷ್ಟು ಏರಿತು.

೩. ಸಕ್ರಿಯ ರಾಜಕೀಯ ಪ್ರವೇಶಿಸುವುದಕ್ಕೆ ಹಿಂದೆ ಬುಷ್ ಸ್ವತಃ ಸಿ.ಐ.ಎ ಯ ಮುಖ್ಯಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದ.

ಅಮೆರಿಕದಲ್ಲಿ ಭಾರೀ ಸಂಖ್ಯೆಯಲ್ಲಿ ಯಹೂದ್ಯರಿದ್ದು, ಅವರಲ್ಲಿ ಹೆಚ್ಚಿನವರು ಪ್ರಭಾವಿ ಸ್ಥಾನಗಳಲ್ಲಿದ್ದಾರೆ. ಯಾವುದೇ ಅಧ್ಯಕ್ಷೀಯ ಚುನಾವಣೆಯಲ್ಲೂ ಜ್ಯೂಗಳ ಮತಗಳು ನಿರ್ಣಾಯಕವಾಗಿರುವುದು ಸಾಧ್ಯವಿದೆ. ತನ್ನ ನೆರೆಯ ಮುಸ್ಲಿಂ ರಾಷ್ಟ್ರಗಳ ಜತೆ ಇಸ್ರೇಲ್ ಎಸಗಿದ್ದ ಯಾವುದೇ ಯುದ್ಧದಲ್ಲೂ ಅಮೆರಿಕದ ಎಲ್ಲ ಆಡಳಿತಗಳು ಬೆಂಬಲಿಸುತ್ತ ಬಂದಿದ್ದುದು ಇಸ್ರೇಲನ್ನೇ.

೧೯೭೩ರ ಅಕ್ಟೋಬರ್ ೬ರಂದು ಈಜಿಪ್ಟ್ ಮತ್ತು ಸಿರಿಯಾ ಏಕಕಾಲದಲ್ಲಿ

ಇಸ್ರೇಲಿನ ಮೇಲೆ ಯುದ್ಧ ಸಾರಿದವು. ಇದರಲ್ಲಿ ಇಸ್ರೇಲನ್ನು ಅಮೆರಿಕ ಬೆಂಬಲಿಸದಂತೆ ಮಾಡಲು ಕೊಲ್ಲಿ ರಾಷ್ಟ್ರಗಳು ತಮ್ಮ 'ತೈಲದ ಅಸ್ತ್ರ'ವನ್ನು ಬಳಸುವಂತೆ ಅವುಗಳ ಮೇಲೆ ಈಜಿಪ್ಟ್ ಒತ್ತಡ ಹೇರಿತು. ಎಲ್ಲ ಕೊಲ್ಲಿ ರಾಷ್ಟ್ರಗಳೂ ತಮ್ಮ ತೈಲ ಉತ್ಪಾದನೆಯನ್ನು ಮತ್ತು ಅಮೆರಿಕಕ್ಕೆ ಅದರ ರಫ್ತನ್ನು ಶೇ.೫ರಷ್ಟು ಕಡಿತಗೊಳಿಸುವ ಮೂಲಕ 'ತೈಲ ನಿರ್ಯಾತ ನಿಷೇಧ'ಕ್ಕಾಗಿ ನಿರ್ಧರಿಸಿದವು. ಇದಲ್ಲದೆ ತಮ್ಮ ಶರತ್ತುಗಳಿಗೆ ಸಮ್ಮತಿಸುವವರೆಗೆ ಪ್ರತಿ ಮಾಸ ಅಮೆರಿಕಕ್ಕೆ ರಫ್ತನ್ನು ಇನ್ನೂ ಶೇ.೫ರಷ್ಟು ಕಡಿಮೆ ಮಾಡುತ್ತಾ ಹೋಗುವುದಾಗಿ ತಿಳಿಸಿದವು. ಪರಿಣಾಮವಾಗಿ ಅಮೆರಿಕದ ಆರ್ಥಿಕತೆ ಅಕ್ಷರಶಃ ತತ್ತರಿಸಿ ಕುಸಿಯತೊಡಗಿತು.

೧೯೭೪ರ ಮಾರ್ಚ್‌ನಲ್ಲಿ ಈ ನಿಷೇಧ ಕೊನೆಗೊಂಡಿತು. ಆ ಕೂಡಲೇ ಅಮೆರಿಕದ ಆಡಳಿತವು ಸೌದಿ ಅರೇಬಿಯಾದ ಸರಕಾರದೊಂದಿಗೆ ಒಪ್ಪಂದದ ಮಾತುಕತೆ ಆರಂಭಿಸಿತು. ಅಮೆರಿಕವು ಸೌದಿ ಅರೇಬಿಯಾಗೆ ತಾಂತ್ರಿಕ ನೆರವು, ಯುದ್ಧಶಸ್ತ್ರಗಳ ಪೂರೈಕೆ ಮತ್ತು ತರಬೇತಿ, ಆ ದೇಶವನ್ನು ೨೦ನೇ ಶತಮಾನದ ಆಧುನಿಕತೆಗೆ ತರಲು ಸರ್ವವಿಧ ಅವಕಾಶಗಳ ಒದಗಿಸುವಿಕೆ – ಇದೆನ್ನೆಲ್ಲ ತಾನು ಮಾಡುವುದಾಗಿ ಆಶ್ವಾಸನೆ ನೀಡಿ, ಅದಕ್ಕೆ ಪ್ರತಿಯಾಗಿ ತನಗೆ ಪೆಟ್ರೋಡಾಲರ್‌ಗಳನ್ನು ಮತ್ತು ಅದಕ್ಕೂ ಮಿಗಿಲಾಗಿ ಮುಂದೆಂದೂ ತೈಲನಿರ್ಯಾತ ನಿಷೇಧ ಹೇರುವುದಿಲ್ಲವೆಂಬ ವಾಗ್ದಾನವನ್ನು ಪಡೆದು ಒಪ್ಪಂದ ಮಾಡಿಕೊಂಡಿತು. ಇದರ ಫಲವಾಗಿ 'ಅಮೆರಿಕ – ಸೌದಿ ಅರೇಬಿಯಾ ಜಂಟಿ ಆರ್ಥಿಕ ಆಯೋಗ' ಹುಟ್ಟಿಕೊಂಡಿತು. ಸೌದಿ ಹಣದ ಮೇಲೆ ನಿರ್ಭರಿತವಾಗಿ ದೇಶದ ನಿರ್ಮಾಣದ ಕೆಲಸವನ್ನು ಅಮೆರಿಕದ ಸಂಸ್ಥೆಗಳು ವಹಿಸಿಕೊಂಡವು. ಈ ಕೆಲಸದಲ್ಲಿ ಅಮೆರಿಕದ ಹಣಕಾಸು ವಿಭಾಗದ ಹಲವು ಸಲಹಾಕಾರರ ಪೈಕಿ ಒಬ್ಬರಾಗಿ MAIN ಎಂಬ ಕಂಪನಿಯ ಪ್ರತಿನಿಧಿಯಾಗಿ ಜಾನ್ ಪರ್ಕಿನ್ಸ್ ಇದ್ದರು. "ಸೌದಿ ಅರೇಬಿಯಾದ ಮೂಲಭೂತ ಸೌಕರ್ಯಗಳಲ್ಲಿ ಭಾರೀ ಪ್ರಮಾಣದಲ್ಲಿ ಹಣ ಹೂಡಿದಲ್ಲಿ ಆ ದೇಶದಲ್ಲಿ ಏನೆಲ್ಲ ಆಗಬಹುದಾದ ಸಂಭವವಿದೆ ಎಂಬ ಭವಿಷ್ಯದ ಸ್ವರೂಪವನ್ನು ವಿಕಾಸಗೊಳಿಸುವ ಕೆಲಸ ನನ್ನದಾಗಿತ್ತು. ಅದಕ್ಕಾಗಿ ಹಣ ವೆಚ್ಚ ಮಾಡುವ ಅಗತ್ಯವಿರುವಂತಹ ಬೃಹದ್ಯೋಜನೆಗಳ ನಕಾಶೆ ನಾನು ತಯಾರಿಸುತ್ತಿದ್ದೆ.... ಎಲ್ಲದರಲ್ಲೂ ಇರುತ್ತಿದ್ದ ಅನಿವಾರ್ಯ ಶರತ್ತು ಎಂದರೆ ಈ ಕೆಲಸಗಳಲ್ಲಿ ತೊಡಗಬೇಕಾದಂತಹವು ಅಮೆರಿಕದ ತಾಂತ್ರಿಕ ಮತ್ತು ಕಾಮಗಾರಿ ಕಂಪನಿಗಳು ಎಂಬುದು" ಎಂದಿದ್ದಾರೆ ಅವರು.

ಈ ವಿಧದ 'ನೇರ ಗುತ್ತಿಗೆ'ಗಳಲ್ಲದೆ ಅವುಗಳಿಗೆ ಇನ್ನೊಂದು 'ರಹಸ್ಯ ಮುಖ'ವೂ ಇತ್ತು. ಸೌದಿ ಅರೇಬಿಯಾವನ್ನು ಆಧುನೀಕರಿಸುವ ಪ್ರಯತ್ನಗಳಿಗೆ ಅಲ್ಲಿಯ ಸಂಪ್ರದಾಯವಾದಿ ಮುಸಲ್ಮಾನರಿಂದ ಮತ್ತು ಇಸ್ರೇಲ್ ಹಾಗೂ ಇನ್ನಿತರ ನೆರೆ ರಾಷ್ಟ್ರಗಳಿಂದಲೂ ತೀವ್ರವಾದ ಪ್ರತಿಕ್ರಿಯೆ ವ್ಯಕ್ತಗೊಳ್ಳುವ ಸಾಧ್ಯತೆಗಳಿದ್ದವು. ಅದರಿಂದಾಗಿ ಅರೇಬಿಯಾ ಪರ್ಯಾಯದ್ವೀಪದ ರಕ್ಷಣೆ ಮಾಡುವಂತಹ ಹೊಸದೊಂದು ಉದ್ಯಮವೇ ಹುಟ್ಟಿಕೊಳ್ಳುತ್ತದೆ! ಆಗ ಇಂಥಹ ಕೆಲಸಗಳಲ್ಲೇ ನಿಷ್ಣಾತರಾಗಿರುವ ಖಾಸಗಿ ಕಂಪನಿಗಳಿಗೆ ಮತ್ತು ಅಮೆರಿಕದ ಸೈನಿಕ ಹಾಗೂ ರಕ್ಷಣಾ ಉದ್ಯಮಗಳಿಗೆ ಭಾರೀ ದೊಡ್ಡ ಪ್ರಮಾಣದ ಕೆಲಸಗಳ ಗುತ್ತಿಗೆಗಳ ಸುಗ್ಗಿಯೇ ಲಭಿಸುವಂತಾಗುತ್ತದೆ.!

ಅದಕ್ಕಾಗಿ ಸೌದಿಯ ಆಡಳಿತದಲ್ಲಿನ ಪ್ರಮುಖ ವ್ಯಕ್ತಿಗಳನ್ನು ಇದಕ್ಕೆ ಒಪ್ಪಿಸುವ ಕೆಲಸವನ್ನು 'ಆರ್ಥಿಕ ಪಾತಕಿ'ಗಳಿಗೆ ವಹಿಸಲಾಯಿತು. ಪರ್ಕಿನ್ಸ್ ಅವರಿಗೆ ಓರ್ವ ನಿರ್ದಿಷ್ಟ ರಾಜಕುಮಾರನನ್ನು ನೋಡಿಕೊಳ್ಳಲು ತಿಳಿಸಲಾಗಿತ್ತು. ಈ ಯೋಜನೆ ತನ್ನ ದೇಶಕ್ಕೆ

ಮತ್ತು ವೈಯಕ್ತಿಕವಾಗಿ ತನಗೂ ವಿಶೇಷವಾಗಿ ಲಾಭದಾಯಕವಾಗಲಿದೆ ಎಂಬುದನ್ನು ರಂಗು ರಂಗಾಗಿ ಆ ರಾಜಕುಮಾರನಿಗೆ ವಿವರಿಸಿ ತಿಳಿಸುವುದು ಪರ್ಕಿನ್ಸ್ ಅವರ ಕೆಲಸವಾಗಿತ್ತು. ಆದರೆ ಪಶ್ಚಿಮದ ವ್ಯಾಪಾರಿ ಮನೋಭಾವಕ್ಕನುಗುಣವಾಗಿ ತನ್ನ ದೇಶ ವಿಕಾಸಗೊಳ್ಳುವುದು ತನಗೆ ಬೇಕಾಗಿಲ್ಲ – ಎಂದ, ಆ ರಾಜಕುಮಾರ. ತಮ್ಮ ಇಸ್ಲಾಂ ಮತ ನಾಶಮಾಡಲು ಪ್ರಯತ್ನಿಸಿದ್ದ ಸಹಸ್ರಮಾನದ ಹಳೆಯ ಆಕ್ರಮಣಕಾರಿಗಳ ಜೊತೆಗೆ ಪರ್ಕಿನ್ಸ್ ಮತ್ತು ಅವರ ಮೇಲಧಿಕಾರಿಗಳನ್ನು ಹೋಲಿಸಿ ಆತ ತಿರಸ್ಕಾರ ಪ್ರಕಟಿಸಿದ.

ಒಂದು ಹಂತದಲ್ಲಂತೂ ಆತನನ್ನು ಒಪ್ಪಿಸುವುದೇ ತುಂಬಾ ಕಠಿಣವೆನಿಸಿತು. ಆದರೆ ಗೌರಾಂಗಿ ಹೆಣ್ಣುಗಳ ಸಂಗದ ಬಯಕೆಯ ದೌರ್ಬಲ್ಯ ಈ ರಾಜಕುಮಾರನಿಗಿರುವ ರಹಸ್ಯ ಪರ್ಕಿನ್ಸ್‌ಗೆ ಗೊತ್ತಾಯಿತು. ಅಲ್ಲಿಂದ ಮುಂದೆ ಆ ರಾಜಕುಮಾರನ ಜೊತೆಗಿರಲು ತಾನು ಸುಂದರಿಯರನ್ನು ಪೂರೈಸುತ್ತಿದ್ದು, ಅಂತಹ ತಲೆಹಿಡುಕ ಹಲ್ಕಾ ಕೆಲಸ ನಿರ್ವಹಿಸಲು ತಗಲುತ್ತಿದ್ದ ವೆಚ್ಚದ ಪಾವತಿಗಳ ನಿರ್ವಹಣೆಗಾಗಿ ತಾನು ಮಾಡುತ್ತಿದ್ದ ಕಸರತ್ತು – ಇತ್ಯಾದಿ ಕುರಿತು ಪರ್ಕಿನ್ಸ್ ವಿವರವಾಗಿ ಹೇಳಿದ್ದಾರೆ. ಕಟ್ಟಕಡೆಯಲ್ಲಿ ಆ ರಾಜಕುಮಾರ ಯೋಜನೆಗೆ ಸಮ್ಮತ್ತಿಸುತ್ತಾನೆ ಮತ್ತು ಸೌದಿಯ ಆಡಳಿತವೂ ಈ ವ್ಯವಹಾರಕ್ಕೆ 'ಅಸ್ತು' ಸೂಚಿಸುತ್ತದೆ. ಹೀಗಾಗಿ "ರಾತ್ರಿ ಕಳೆಯುವುದರೊಳಗೆ ಆ ರಾಜ್ಯವೇ ಪರಿವರ್ತಿತವಾಗುತ್ತದೆ."

ಈ ವ್ಯವಹಾರದ್ದೇ ಇನ್ನೊಂದು ಭಾಗವಾಗಿ ಅಮೆರಿಕವು ಸೌದಿ ಅರೇಬಿಯಾದಲ್ಲಿ ಹಲವಾರು ವಿವಿಧ ಕಾನೂನುಬಾಹಿರ ಚಟುವಟಿಕೆಗಳಿಗೆ ಕುಮ್ಮಕ್ಕು ನೀಡಲು ಆರಂಭಿಸಿತು. ಅವುಗಳಲ್ಲಿ ಅತ್ಯಂತ ಕುಟಿಲ ಮತ್ತು ಮುಂದೆ ಭಾರೀ ವಿನಾಶಕಾರಿಯಾಗಿ ಆದುದೆಂದರೆ ಅಂತರರಾಷ್ಟ್ರೀಯ ಭಯೋತ್ಪಾದನೆಗೆ ಸೌದಿ ಹಣ ಪೂರೈಸುವಂತೆ ಮಾಡಿದುದು. ಒಸಾಮಾ ಬಿನ್ ಲಾಡೆನ್ ನೇತೃತ್ವದಲ್ಲಿ ಆಫಘನಿಸ್ತಾನ ೧೯೮೦ರ ದಶಕದಲ್ಲಿ ಸೋವಿಯತ್ ರಷ್ಯಾದ ವಿರುದ್ಧ ಯುದ್ಧದಲ್ಲಿ ತೊಡಗಿದ್ದಾಗ ಸೌದಿ ಆಡಳಿತವು ಆತನಿಗೆ ಹಣ ಪೂರೈಸುವಂತೆ ಮಾಡುವುದರಲ್ಲಿ ತಾನು ನಿರ್ವಹಿಸಿದ ಪಾತ್ರವನ್ನು ಮುಚ್ಚುಮರೆಯಾಗಿಡಬೇಕಾದ ಬಯಕೆ ಸಹ ಅಮೆರಿಕಕ್ಕಿರಲಿಲ್ಲ. ಆ ಸಂದರ್ಭದಲ್ಲಿ ಸೌದಿ ಮತ್ತು ಅಮೆರಿಕ ಒಟ್ಟುಗೂಡಿ ಮುಜಾಹಿದ್ದೀನ್‌ಗಳಿಗೆ ೩.೫ ಬಿಲಿಯನ್ ಡಾಲರ್‌ಗಳಷ್ಟು ಸಹಾಯ ನೀಡಿದವು. "ಅದಕ್ಕಿಂತಲೂ ಮೀರಿ ಇದ್ದುದು ಆ ಪ್ರಕರಣದಲ್ಲಿ ಅಮೆರಿಕ ಮತ್ತು ಸೌದಿ ಆಡಳಿತಗಳ ಪ್ರತ್ಯಕ್ಷ ಸಹಭಾಗಿತ್ವ" ಎನ್ನುತ್ತಾರೆ ಪರ್ಕಿನ್ಸ್.

ಇರಾನಿನಲ್ಲಿ ಶಹಾ ರೇಜಾ ಪಹ್ಲವಿಗೆ ಅಮೆರಿಕದ ಪೂರಾ ಬೆಂಬಲವಿತ್ತು. ತೈಲ ಉತ್ಪಾದಕ ರಾಷ್ಟ್ರಗಳ ಒಕ್ಕೂಟ 'OPEC' ಭಾರೀ ಶಕ್ತಿಶಾಲಿಯಾಗಿದ್ದ ಮತ್ತು ಶಹಾ ಓರ್ವ ಪ್ರಭಾವೀ ವಿಶ್ವನಾಯಕನಾಗಿದ್ದ ಕಾಲ ಅದು. ಇರಾನಿನಲ್ಲಿ ಪರ್ಕಿನ್ಸ್ ಪ್ರತಿನಿಧಿಸುತ್ತಿದ್ದ MAIN ಸಂಸ್ಥೆಯು ಹಲವಾರು ಕಾಮಗಾರಿಗಳನ್ನು ನಡೆಸುತ್ತಿತ್ತು. ಮೇಲ್ನೋಟಕ್ಕೆ ಎಲ್ಲವೂ ಚೆನ್ನಾಗಿಯೇ ಕಾಣಿಸುತ್ತಿದ್ದರೂ, ಶಹಾನ ವಿರುದ್ಧ ಜನಾಕ್ರೋಶದ ಒಳಗುದಿ ಸಹ ತೀವ್ರಗೊಳ್ಳುತ್ತಲೇ ಇತ್ತು. ಪರಿಸ್ಥಿತಿಯ ಮೇಲೆ ತನ್ನ ಹತೋಟಿಯಿರುವಂತೆ ಅಮೆರಿಕ ತೋರಿಸಿಕೊಳ್ಳುತ್ತಿದ್ದರೂ ವಾಸ್ತವಿಕತೆ ಹಾಗಿರಲಿಲ್ಲ. ಕಟ್ಟಕಡೆಯಲ್ಲಿ ಖೊಮೇನಿಯ ನಾಯಕತ್ವದಲ್ಲಿ ೧೯೭೯ರ ದಂಗೆ ಆಸ್ಫೋಟಗೊಂಡು ಶಹಾನ ಪದಚ್ಯುತಿಯಾಯಿತು. ಅಮೆರಿಕದ ಎಲ್ಲ ಸಂಸ್ಥೆಗಳೂ ಇರಾನಿನಿಂದ ಹೊರದಬ್ಬಲ್ಪಟ್ಟವು. ಅವುಗಳಿಗೆ ಮಿಲಿಯಾಂತರ ಡಾಲರ್‌ಗಳ ನಷ್ಟವಾಯಿತು. "ವಿಶ್ವದಲ್ಲಿ ತನ್ನ ಪಾತ್ರದ ಯತಾರ್ಥತೆಯನ್ನೇ ಅರಿತಿರದ ರಾಷ್ಟ್ರ ಅಮೆರಿಕ ಎಂಬುದು ಇರಾನಿನ ಸಂದರ್ಭದಲ್ಲಿ ಪೂರಾ ಸಾಬೀತುಗೊಂಡಿತು.

ರೇಜಾ ಶಹಾನ ಬಗ್ಗೆ ನೈಜ ಮಾಹತಿಗಳೇ ತಿಳಿದಿರದ ಹಾಗೂ ಆತನ ವಿರುದ್ಧ ವಿದ್ವೇಷದ ಮಹಾಪೂರವೇ ಇರುವುದರ ಸುಳಿವು ಸಹ ಇರದವರಾಗಿದ್ದೆವು ನಾವು" - ಎಂದಿದ್ದಾರೆ ಪರ್ಕಿನ್ಸ್.

ಇನ್ನೊಂದು ತೈಲ ಸಂಪನ್ನ ರಾಷ್ಟ್ರವಾದ ಈಕ್ವೆಡಾರ್‌ನ ರಾಷ್ಟ್ರಾಧ್ಯಕ್ಷನಾಗಿ ೧೯೭೯ರಲ್ಲಿ ಜೈಮೆ ರೋಲ್ಡೋಸ್ ಚುನಾಯಿತನಾದ. ಆತ ಉದ್ಯಮಶಾಹಿಗೆ ಮಣಿಯದವನಾಗಿದ್ದು, ಬಡವರ ಹಕ್ಕುಗಳ ಬಗ್ಗೆ ಪ್ರಖರವಾದ ನಂಬಿಕೆಯಿರಿಸಿದ್ದವನು. ಆ ದೇಶದಲ್ಲಿ 'ಸಮ್ಮರ್ ಇನ್‌ಸ್ಟಿಟ್ಯೂಟ್ ಆಫ್ ಲಿಂಗ್ವಿಸ್ಟಿಕ್ಸ್' (SIL)ಎಂಬ ಸೋಗಿನಲ್ಲಿ ಅಮೆರಿಕದ ಕ್ರೈಸ್ತ ಮಿಶನರಿ ತಂಡವೊಂದು ಕಾರ್ಯನಿರತವಾಗಿತ್ತು. 'ಸ್ಥಾನೀಯ ಭಾಷೆಗಳ ಅಧ್ಯಯನ, ದಾಖಲಾತಿ ಮತ್ತು ಭಾಷಾಂತರ ಕಾರ್ಯ'ದ ಮುಖವಾಡ ಧರಿಸಿಕೊಂಡಿತ್ತು ಅದು. ಯಾವುದೋ ಒಂದು ಪ್ರದೇಶದಲ್ಲಿ ಭಾರೀ ಪ್ರಮಾಣದ ತೈಲನಿಕ್ಷೇಪವಿರುವ ಸಂಭವವಿರುವುದಾಗಿ ಭೂಗರ್ಭಶಾಸ್ತ್ರಜ್ಞರು ಉದ್ಯಮಗಳ ಮುಖ್ಯ ಕಚೇರಿಗಳಿಗೆ ವರದಿ ಕಳುಹಿಸಿದಾಗಲೆಲ್ಲ 'SIL'ನ ಕಾರ್ಯಕರ್ತರು ಅಲ್ಲಿಗೆ ಧಾವಿಸುತ್ತಿದ್ದರು. ಅಲ್ಲಿನ ಸ್ಥಾನೀಯ ಜನರಿಗೆ ಆ ಪ್ರದೇಶ ಬಿಟ್ಟು ಮಿಶನರಿಗಳು ಇರುವ ಪ್ರದೇಶಕ್ಕೆ ಬರುವಂತೆ ಹಾಗೂ ಅಲ್ಲಿ ಅವರಿಗೆ ಆಹಾರ, ಬಟ್ಟೆ, ವೈದ್ಯಕೀಯ ಚಿಕಿತ್ಸೆ ಇತ್ಯಾದಿ ಎಲ್ಲವನ್ನೂ ತಾವು ಒದಗಿಸುವುದಾಗಿ ಹೇಳುತ್ತಿದ್ದರು. ಅವರು ಮಂಡಿಸುತ್ತಿದ್ದ ಶರತ್ತು ಒಂದೇ : ಆ ಜನರು ತಮ್ಮ ಜಮೀನನ್ನು ತೈಲಕಂಪನಿಗಳಿಗೆ ಮಾತ್ರ ವಿಕ್ರಯಿಸಬೇಕು – ಎಂದು.

೧೯೮೧ರ ಆರಂಭದಲ್ಲಿ ರೋಲ್ಡೋಸ್ ಈಕ್ವಡಾರ್‌ನ ಸಂಸತ್ತಿನಲ್ಲಿ ಒಂದು ಶಾಸನವನ್ನು ಜಾರಿಗೊಳಿಸಿದ. ಅದು ಕಾರ್ಯಗತಗೊಂಡಾಗ ತೈಲಕಂಪನಿಗಳ ಜೊತೆ ದೇಶದ ಸಂಬಂಧಗಳು ಹೊಸ ರೂಪ ತಾಳುವಂತಿತ್ತು. ಕಂಪನಿಗಳು ನಿರೀಕ್ಷಿತ ರೀತಿಯಲ್ಲೇ ಪ್ರತಿಕ್ರಿಯಿಸಿದವು. ಅವರ ಸಲಹಾಕಾರರು ಈಕ್ವಡಾರ್‌ನ ರಾಜಧಾನಿ ಕ್ವಿಟ್ಟೋಗೆ ಧಾವಿಸಿ ಬಂದರು. ಅಮೆರಿಕದ ಆಡಳಿತ ಸಹ ಬ್ರೀಫ್‌ಕೇಸ್‌ಗಳಲ್ಲಿ ಲಂಚದ ಹಣ ಮತ್ತು ಬೆದರಿಕೆಗಳ ಸಹಿತ ಈಕ್ವಡಾರ್‌ಗೆ ಧಾವಿಸಿತು. ಆದರೆ ರೋಲ್ಡೋಸ್ ಅದರ ಮುಂದೆ ಮಣಿಯಲಿಲ್ಲ. ತದ್ವಿರುದ್ಧವಾಗಿ ಆತ ತೈಲ ರಾಜಕಾರಣ ಮತ್ತು ಮತಪ್ರಚಾರ ಇತ್ಯಾದಿ ಪಿತೂರಿಗಳ ಕುರಿತು ಬಹಿರಂಗವಾಗಿ ಮಾತನಾಡಲಾರಂಭಿಸಿದ. SIL ಅನ್ನು ಆತ ದೇಶದಿಂದ ಹೊರಗಟ್ಟಿದ.

ರೋಲ್ಡೋಸ್ ಜತೆ 'ಆರ್ಥಿಕಪಾತಕಿ'ಗಳ ಆಟ ಏನೂ ನಡೆಯದು ಎಂದು ಗೊತ್ತಾದಾಗ, 'ತೋಳ'ಗಳು (Jackals) ಎಂಬ ಇನ್ನೊಂದು ವಿಧ 'ಪಾತಕಿ'ಗಳಿಗೆ ಕೆಲಸವನ್ನು ವಹಿಸಿಕೊಡಲಾಯಿತು. ೧೯೮೧ರ ಮೇ೨೪ರಂದು ರೋಲ್ಡೋಸ್ ಹೊತ್ತಿ ಉರಿಯುವ ಒಂದು ಹೆಲಿಕಾಪ್ಟರ್ ಅಪಘಾತದಲ್ಲಿ ನಿಧನನಾದ. ಸಂಪೂರ್ಣ ವಿಶ್ವಕ್ಕೆ ಅದೊಂದು ಆಘಾತಕಾರಿ ಘಟನೆ. ಲ್ಯಾಟಿನ್ ಅಮೆರಿಕದ ದೇಶಗಳು ಕೋಪದಿಂದ ಕಿಡಿಕಾರಿದವು. "ಸಿ.ಐ.ಎ.ಯಿಂದ ಹತ್ಯೆ" ಎಂದು ಪತ್ರಿಕೆಗಳು ಸುದ್ದಿ ಮಿಂಚಿಸಿದವು. ವಿಶ್ವದಾದ್ಯಂತ ಭಾರೀ ಪ್ರತಿಕ್ರಿಯೆ ಭುಗಿಲೆದ್ದರೂ ಅಮೆರಿಕದ ಪತ್ರಿಕೆಗಳಲ್ಲಿ ಮಾತ್ರ ಅದು ಸುದ್ದಿಯಾಗಲೇ ಇಲ್ಲ. ಈಕ್ವಡಾರ್‌ನ ಹೊಸ ರಾಷ್ಟ್ರಾಧ್ಯಕ್ಷ ಒಸ್ವಾಲ್ಡೋ ಹುರ್ತಾದೋ SIL ಅನ್ನು ಪುನಃ ಕರೆಸಿ, ರೋಲ್ಡೋಸ್ ಜಾರಿಗೊಳಿಸಿದ್ದ ಸುಧಾರಣೆಗಳನ್ನೆಲ್ಲಾ ನಿರಸ್ತಗೊಳಿಸಿದ.

ಈಕ್ವಡಾರ್‌ನ ಪರಿಸ್ಥಿತಿ (ಅಧಿಕೃತ ಮಾಹಿತಿಗಳು)

	೧೯೭೦ರಲ್ಲಿ	ಈಗ
ಬಡತನದ ಮಟ್ಟ	೫೦%	೭೦%
ನಿರುದ್ಯೋಗ/ಅರೆ ಉದ್ಯೋಗ	೧೫%	೭೦%
ಸಾರ್ವಜನಿಕ ಸಾಲ	೨೪೦ ಮಿ. $	೧೬ ಬಿ. $
ಅತಿ ಬಡವರ್ಗದವರಿಗೆ ಪ್ರಾಕೃತಿಕ ಸಂಪನ್ಮೂಲಗಳ ಲಭ್ಯತೆ	೨೦%	೬%

ಪನಾಮಾ ದೇಶಕ್ಕೆ ಅದರ ಕಾಲುವೆ ಮತ್ತು ಭೌಗೋಳಿಕ ಸನ್ನಿವೇಶವೇ ಅತಿದೊಡ್ಡ ಶಕ್ತಿ. (ಪನಾಮಾ ಕಾಲುವೆಯ ಮೂಲಕವೇ ಅಟ್ಲಾಂಟಿಕ್ ಮತ್ತು ಫೆಸಿಫಿಕ್ ಸಾಗರಗಳ ನಡುವೆ ಸಂಪರ್ಕವೇರ್ಪಟ್ಟಿರುವುದು.) ತನ್ನ ವಾಣಿಜ್ಯ ಮತ್ತು ಸಾಮರಿಕ ಹಿತಾಸಕ್ತಿಗಳ ರಕ್ಷಣೆಗಾಗಿ ಪನಾಮಾವನ್ನು ತನ್ನ ವಶದಲ್ಲಿರಿಸಿಕೊಳ್ಳಬೇಕೆಂಬುದು ಅಮೆರಿಕದ ಸದಾಕಾಲದ ಹವಣಿಕೆಯಾಗಿತ್ತು. ೧೯೬೮ರ ವರೆಗೂ ಪನಾಮಾದಲ್ಲಿ ಆಳ್ವಿಕೆ ಇರುತ್ತಿದ್ದುದು ಅಮೆರಿಕದ ಬೆಂಬಲ ಪಡೆದಿದ್ದ ಶ್ರೀಮಂತ ಪರಿವಾರಗಳದ್ದು. ಪನಾಮಾದಲ್ಲಿ ಅವು ಅಮೆರಿಕದ ಹಿತಾಸಕ್ತಿಗಳನ್ನು ಕಾಪಾಡುತ್ತಿದ್ದವು ಮತ್ತು ಅದಕ್ಕೆ ಪ್ರತಿಯಾಗಿ ಸಿ.ಐ.ಎ. ಮತ್ತು ವಿಶ್ವಬ್ಯಾಂಕ್‌ನ ಸಹಾಯದಿಂದ ತಮ್ಮ ಆಳ್ವಿಕೆಯನ್ನು ಉಳಿಸಿಕೊಳ್ಳುತ್ತಿದ್ದವು. ೧೯೬೮ರಲ್ಲಿ ನಡೆದ ಒಂದು ಬಂಡಾಯದಲ್ಲಿ ಅಮೆರಿಕದ ಪರ ಸರ್ವಾಧಿಕಾರಿಯನ್ನು ಪದಚ್ಯುತ ಗೊಳಿಸಿ ಜನರಲ್ ಓಮರ್ ಟೋರಿಜೋಸ್ ಅಧ್ಯಕ್ಷ ಪೀಠವೇರಿದ. ಆತ ತುಂಬಾ ಜನಪ್ರಿಯನಾಗಿದ್ದ ಮತ್ತು ತನ್ನ ಜನರ ಏಳ್ಗೆಯಲ್ಲಿ ಕಾಳಜಿಹೊಂದಿ ಕಾರ್ಯನಿರತನೂ ಆಗಿದ್ದ. ಸ್ವಂತದ ಲಾಭಕ್ಕಾಗಿ ಸ್ವಲ್ಪವೂ ಇಷ್ಟಪಡದೆ ತನ್ನ ಜನರಿಗೆ ನಿಜಕ್ಕೂ ಅತ್ಯುಪಯುಕ್ತವಾದುದು ಯಾವುದೆಂಬುದನ್ನು ತಿಳಿದು ಕಾರ್ಯೋನ್ಮುಖನಾಗಲು ಆತ ಉತ್ಸುಕನಾಗಿರುತ್ತಿದ್ದುದನ್ನು ಕಂಡು ತಾನೂ ಅಚ್ಚರಿಪಟ್ಟೆ ಎಂದಿದ್ದಾರೆ ಪರ್ಕಿನ್ಸ್. ಮುಂದಿನ ದಿನಗಳಲ್ಲಿ ಅಮೆರಿಕದ ವ್ಯಾಪಾರಿ ಹಿತಾಸಕ್ತಿಗಳಿಗೆ ಮಾರಕವಾದ, ಆದರೆ ತನ್ನ ಜನರಿಗೆ ನಿಜಕ್ಕೂ ಲಾಭದಾಯಕವಾಗುವಂತಹ ಹಲವಾರು ಯೋಜನೆಗಳನ್ನು ಟೋರಿಜೋಸ್ ಜಾರಿಗೊಳಿಸಿದ. ಜೇಮ್ಸ್ ಕಾರ್ಟರ್ ಅಮೆರಿಕದ ರಾಷ್ಟ್ರಾಧ್ಯಕ್ಷನಾಗಿದ್ದಾಗ ಟೋರಿಜೋಸ್ ಅಮೆರಿಕದೊಡನೆ ಮಾಡಿದ ಒಂದು ಒಪ್ಪಂದದಿಂದಾಗಿ ತನ್ನ ಕಾಲುವೆಯ ಮೇಲೆ ಪನಾಮಾಗೆ ಹೆಚ್ಚಿನ ನಿಯಂತ್ರಣ ಸಿಕ್ಕಿತು.

ಮುಂದಿನ ಚುನಾವಣೆಯಲ್ಲಿ ಕಾರ್ಟರ್ ಸೋತ, ಮತ್ತು ರೀಗನ್-ಬುಷ್ ಆಡಳಿತ ಆರಂಭವಾಯಿತು. ಇವರಿಬ್ಬರೂ ಉದ್ಯಮಶಾಹಿಯ ವಿರುದ್ಧ ಟೋರಿಜೋಸ್ ಸಾರಿದ್ದ ಹೋರಾಟವನ್ನು ಸಹಿಸಲಾರದವರಾಗಿದ್ದರು. ೧೯೮೧ ಜುಲೈ ೩೧ರಂದು ಟೋರಿಜೋಸ್ ಅಪಘಾತವೊಂದರಲ್ಲಿ ಸಾವನ್ನಪ್ಪಿದ. ಹೀಗೆ ಕೇವಲ ಎರಡೇ ತಿಂಗಳ ಕಾಲಾವಧಿಯಲ್ಲಿ ಸಿ.ಐ.ಎ. ನಡೆಸಿದ ಎರಡನೆಯ ಕೊಲೆ ಅದು.

ಪನಾಮಾಗೆ ಮುಂದಿನ ರಾಷ್ಟ್ರಾಧ್ಯಕ್ಷನಾದವನು ನೋರಿಯೇಗಾ ಇವನಿಗೆ ಸಿ.ಐ.ಎ.ಯ ಮುಖ್ಯಾಧಿಕಾರಿಯ ಜೊತೆ ನಿಕಟ ಸಂಬಂಧವಿತ್ತು. ಅದನ್ನು ಬಳಸಿ ಕೆರೆಬಿಯನ್ ದೇಶಗಳು, ಮಧ್ಯ ಮತ್ತು ದಕ್ಷಿಣ ಅಮೆರಿಕದ ಉದ್ದಗಲದಲ್ಲಿ ಸಿ.ಐ.ಎ. ತನ್ನ

ಕಾರ್ಯಸೂಚಿಯಲ್ಲಿನ ಯೋಜನೆಗಳನ್ನು ವ್ಯಾಪಕವಾಗಿ ಬೆಳಸಿತು. ಇವೆಲ್ಲ ಪ್ರದೇಶಗಳು ವಿಶ್ವದ ಮಾದಕ ದ್ರವ್ಯಗಳ ಅನಿಷ್ಟ ಕೇಂದ್ರವಾಗಿ ಕುಖ್ಯಾತಿಗಳಿಸಿದವು.

ಅಷ್ಟಾದರೂ ನೋರಿಯೇಗಾ ಪನಾಮಾ ಕಾಲುವೆಯ ವಿಷಯದಲ್ಲಿ ಶರಣಾಗಲು ಸಿದ್ಧನಿರಲಿಲ್ಲ. ಹೀಗಾಗಿ ಬೇರ್‍ಯಾವ ಉಪಾಯವೂ ಕಾಣದೆ ೧೯೮೯ಡಿಸೆಂಬರ್ ೨೦ರಂದು ಅಮೆರಿಕ ಪನಾಮಾದ ಮೇಲೆ ಯುದ್ಧಕ್ಕಿಳಿಯಿತು. ಯಾವುದೇ ಕಾರಣವಿಲ್ಲದೆ ನಾಗರೀಕ ಸಮುದಾಯದ ಮೇಲೆ ಎಸಗಲಾದ, ದ್ವಿತೀಯ ವಿಶ್ವಸಮರದ ನಂತರದ ಅತೀ ದೊಡ್ಡ ಆಕಾಶ ಧಾಳಿ ಅದು ಎಂದು ಹೇಳಲಾಗಿದೆ. ಈ ಆಕ್ರಮಣದ ಪರಿಣಾಮವಾಗಿ ಅರಿಯಾಸ್ ಪರಿವಾರ ಮತ್ತು ಟೋರಿಜೋಸ್‌ಗಿಂತ ಪೂರ್ವದಲ್ಲಿದ ಕೆಲವೇ ಕೆಲವರ ಆಳ್ವಿಕೆಯನ್ನು ಪನಾಮಾದಲ್ಲಿ ಪುನಃ ಪ್ರತಿಸ್ಥಾಪಿಸಲಾಯಿತು. ಹೀಗೆ ವಿಶ್ವದ ಅತಿ ಅಮೂಲ್ಯ ಆಸ್ತಿಯೆನಿಸಿದ ಪನಾಮಾ ಕಾಲುವೆಯ ಮೇಲೆ ಅಮೆರಿಕ ಪುನಃ ತನ್ನ ಹಿಡಿತವನ್ನು ಸಾಧಿಸಿತು.

ಇರಾಕ್‌ನ ಬಹುಮೂಲ್ಯ ಆಸ್ತಿಯೆಂದರೆ ಅಲ್ಲಿನ ತೈಲ ನಿಕ್ಷೇಪಕ್ಕಿಂತಲೂ ಹೆಚ್ಚಾಗಿ ಅಲ್ಲಿರುವ ನೀರು ! ಟೈಗ್ರಿಸ್ ಮತ್ತು ಯುಫ್ರೆಟಿಸ್ ಇವೆರಡೂ ನದಿಗಳು ಹರಿಯುವುದು ಇರಾಕ್‌ನಲ್ಲಿ. ಹೀಗಾಗಿ ಜಗತ್ತಿನ ಈ ಪ್ರದೇಶದಲ್ಲಿನ ಎಲ್ಲ ದೇಶಗಳ ಪೈಕಿ ಇರಾಕ್‌ಗೆ ಮಾತ್ರ ಈ ಮುಖ್ಯವಾದ ಸಂಪನ್ಮೂಲದ ಮೇಲೆ ಪೂರಾ ಹಿಡಿತವಿದೆ. ಜೊತೆಯಲ್ಲಿ ಇರಾನ್, ಕುವೈತ್, ಸೌದಿ ಅರೇಬಿಯಾ, ಜೋರ್ಡಾನ್, ಸಿರಿಯಾ ಮತ್ತು ಟರ್ಕಿ ಇವೆಲ್ಲಾ ದೇಶಗಳ ಗಡಿಗಳೊಂದಿಗೆ ಲಗತ್ತಾಗಿರುವ ದೇಶವೆಂದರೆ ಇರಾಕ್. ಇದಲ್ಲದೆ ಪರ್ಶಿಯನ್ ಕೊಲ್ಲಿಯುದ್ದಕ್ಕೂ ಕರಾವಳಿಯನ್ನೂ ಇರಾಕ್ ಹೊಂದಿದೆ. ಇಸ್ರೇಲ್ ಮತ್ತು ಪೂರ್ವದ ಸೋವಿಯತ್ ರಷ್ಯಾ ಭಾಗದಿಂದ ಕ್ಷಿಪಣಿ ಆಘಾತಕ್ಕೆ ಒಳಗಾಗುವ ದೂರಮಿತಿಯೊಳಗೂ ಅದು ಇದೆ. ಹೀಗಾಗಿ ಇರಾಕ್ ಮೇಲೆ ಪ್ರಭುತ್ವ ಹೊಂದಿರುವವರು ಪೂರಾ ಮಧ್ಯಪೂರ್ವ ಪ್ರದೇಶದ ಮೇಲೆ ತಮ್ಮ ಅಂಕಿತವಿರಿಸಿಕೊಳ್ಳಬಲ್ಲರು ಎಂಬುದು ಈಗ ಸರ್ವವಿದಿತ.

೧೯೮೦ರ ದಶಕದ ಉತ್ತರಾರ್ಧದಲ್ಲಿ ಸದ್ದಾಂ ಹುಸೇನ್ 'ಆರ್ಥಿಕಪಾತಕಿ'ಗಳಿಗೆ ಸೊಪ್ಪುಹಾಕುವವನಲ್ಲ ಎಂಬುದು ಸ್ಪಷ್ಟವಾಗಿ ಗೋಚರಿಸತೊಡಗಿತ್ತು. ಇದರಿಂದಾಗಿ ತುಂಬಾ ಪೇಚಿಗೀಡಾಗಿದ್ದ ಬುಷ್ ಆಡಳಿತವು ಇರಾಕ್‌ಮೇಲೆ ಧಾಳಿ ನಡೆಸಲು ಒಂದು ನೆಪಕ್ಕಾಗಿ ಹುಡುಕುತ್ತಿದ್ದಾಗಲೇ, ಕುವೈತ್ ಮೇಲೆ ಸದ್ದಾಂ ಹುಸೇನ್ ೧೯೯೦ರ ಆಗಸ್ಟ್‌ನಲ್ಲಿ ಎಸಗಿದ ಆಕ್ರಮಣದಿಂದಾಗಿ ಅಂತಹ ಸದವಕಾಶ ಅಮೆರಿಕಕ್ಕೆ ಸುಲಭವಾಗಿ ಲಭಿಸಿತು. ಕೇವಲ ಒಂದು ವರ್ಷದ ಹಿಂದಷ್ಟೇ ಜಾರ್ಜ್ ಬುಷ್ (ಹಿರಿಯ) ತಾನೇ ಸ್ವತಃ ಕಾರಣವೇ ಇಲ್ಲದೆ ಪನಾಮಾ ಮೇಲೆ ಧಾಳಿಯೆಸಗಿರುವ ತಪ್ಪು ಮಾಡಿದ್ದರೂ, ಸದ್ದಾಂ ಹುಸೇನನ ಈ ಆಕ್ರಮಣವನ್ನು ಬುಷ್ ಕಟುವಾಗಿ ನಿಂದಿಸಿದ.

೨೦೦೩ರಲ್ಲಿ ಹಿರಿಯ ಬುಷ್‌ನ ಮಗ ಜಾರ್ಜ್.ಡಬ್ಲ್ಯು.ಬುಷ್ (ಎರಡನೆಯ) ನ ಆಳ್ವಿಕೆಯಲ್ಲಿ ಅಮೆರಿಕದ ಸೇನೆ ಪುನಃ ಇರಾಕ್ ಮೇಲೆ ಆಕ್ರಮಣವೆಸಗಿತು. ಸದ್ದಾಂ ಹುಸೇನನನ್ನು ಸೆರೆಯೂ ಹಿಡಿಯಿತು. ಮುಂದೆ ನಡೆದುದೆಲ್ಲವೂ ಈಗ ಎಲ್ಲರೂ ತಿಳಿದಿರುವ ಕಥೆ.

೧೯೯೮ರಲ್ಲಿ ಹ್ಯೂಗೋ ಚಾವೆಜ್ ವೆನೆಜುವೇಲಾದ ರಾಷ್ಟ್ರಾಧ್ಯಕ್ಷನಾಗಿ ಚುನಾಯಿತನಾದ. ಆತ ಅನೇಕ ಸುಧಾರಣೆಗಳನ್ನು ತಂದುದಲ್ಲದೆ, ವಿದೇಶಿ ತೈಲ ಕಂಪನಿಗಳು ಸಲ್ಲಿಸಬೇಕಾದ ರಾಯಧನವನ್ನು ಎರಡುಪಟ್ಟುಗೊಳಿಸಿದ. ೨೦೦೨ರ

ಹೊತ್ತಿಗೆ ವಿಶ್ವದ ತೈಲ ರಫ್ತುಗಾರ ದೇಶಗಳ ಪೈಕಿ ವೆನಿಜುವೇಲಾದು ೪ನೇ ಅತಿ ದೊಡ್ಡ ಸ್ಥಾನವಾಗಿತ್ತು ; ಮತ್ತು ಅಮೆರಿಕಕ್ಕೆ ತೈಲ ಪೂರೈಕೆ ಮಾಡುತ್ತಿದ್ದ ದೇಶಗಳ ಪೈಕಿ ಅದು ೩ನೇ ಸ್ಥಾನದಲ್ಲಿತ್ತು.

ಕೊಲ್ಲಿರಾಷ್ಟ್ರಗಳು ತೈಲ ನಿರ್ಯಾತ ನಿಷೇಧ ವಿಧಿಸಿದ್ದ ೧೯೭೩ರ ಕಾಲದಲ್ಲಿ ಪರಿಸ್ಥಿತಿಯ ಭಾರೀ ಲಾಭ ಪಡೆದಿದ್ದುದು ವೆನೆಜುವೆಲಾ. ಆದರೆ ಮುಂದೆ 'ಆರ್ಥಿಕಪಾತಕಿ'ಗಳ ಕಾರ್ಯಾಚರಣೆಯಿಂದಾಗಿ ಅದೊಂದು ಸಾಲಗಾರ ದೇಶವಾಯಿತು. ನಿರ್ಯಾತ ನಿಷೇಧ ಕೊನೆಗೊಂಡಾಗ ತೈಲ ಬೆಲೆ ಪೂರಾ ಕುಸಿದಿತ್ತು. ಇದರಿಂದಾಗಿ ವೆನೆಜುವೆಲಾ ತನ್ನ ಸಾಲ ಪಾವತಿಯಲ್ಲಿ ಇನ್ನಷ್ಟು ಸೋತಿತು. ೧೯೮೯ರಲ್ಲಿ ಅಂತರರಾಷ್ಟ್ರೀಯ ವಿತ್ತ ನಿಧಿ ಸಾಲ ಮರುಪಾವತಿಯ ವಿಷಯದಲ್ಲಿ ವೆನೆಜುವೆಲಾದ ಕೈ ತಿರುವಿತು. ಇದಕ್ಕೆ ಅಲ್ಲಿನ ಜನರು ಹಿಂಸಾತ್ಮಕವಾಗಿ ಪ್ರತಿಕ್ರಿಯಿಸಿದರು. ಆಗ ಅಲ್ಲಿ ನಡೆದ ದಂಗೆಗಳಲ್ಲಿ ೨೦೦೦ ಮಂದಿಯ ಪ್ರಾಣದಾಹುತಿಯಾಯಿತು. ದೇಶದಲ್ಲಿ ಬಡತನ ಹೆಚ್ಚಿ, ಸಮಾಜದಲ್ಲಿ ಧ್ರುವೀಕರಣವಾಗಿ ಮಧ್ಯಮ ವರ್ಗದವರು ಬಡವರ ವಿರೋಧಿಗಳಾದರು.

ಇಂತಹ ಆಂದೋಲನಕಾರಿ ಪರಿಸ್ಥಿತಿಯಲ್ಲಿ ನೂತನ ಅಧ್ಯಕ್ಷನಾಗಿ ಚಾವೆಜ್ ಚುನಾಯಿತನಾದ. ಜನರು ಆತನಲ್ಲಿ ತುಂಬಾ ಭರವಸೆ ಇರಿಸಿದ್ದರು. ಆದರೆ ಅವನು ಕೈಗೊಂಡ ಕ್ರಮಗಳಿಂದಾಗಿ ಬುಷ್ ಆಡಳಿತ ಅಸಮಾಧಾನಗೊಂಡಿತು. ೯/೧೧ ಘಟನೆಗಿಂತ ಸ್ವಲ್ಪ ಮೊದಲು ಅವನ ವಿರುದ್ಧ ಕ್ರಮ ಕೈಗೊಳ್ಳಲು ಅಮೆರಿಕದ ಆಡಳಿತ ಸಿದ್ಧತೆ ನಡೆಸಿತ್ತು. ಆದರೆ ೯/೧೧ರ ಘಟನೆಯಿಂದಾಗಿ ಸನ್ನಿವೇಶಗಳು ಬದಲಾದಾಗ ಅಮೆರಿಕದ ಆದ್ಯತೆಗಳೂ ವ್ಯತ್ಯಾಸವಾದವು.

೨೦೦೨ರ ಡಿಸೆಂಬರ್‌ನಲ್ಲಿ ೩೦ಸಾವಿರ ತೈಲ ಕಾರ್ಮಿಕರು ಒಂದು ತಿಂಗಳಕಾಲ ನಡೆಸಿದ ಮುಷ್ಕರದ ನಂತರ ಚಾವೆಜ್ ಪದಚ್ಯುತನಾದ. ಈ ಮುಷ್ಕರಕ್ಕೆ 'ದುಷ್ಪ್ರೇರಣೆ' ನೀಡಿದುದು ಅಮೆರಿಕದ ಆಡಳಿತವೇ ಎಂಬ ಆರೋಪವಿದೆ. ಆದರೆ ಅತ್ಯಾಶ್ಚರ್ಯಕರ ರೀತಿಯಲ್ಲಿ ಪರಿಸ್ಥಿತಿಯ ತಿರುವಿನಿಂದಾಗಿ ಕೇವಲ ೭೨ ಗಂಟೆಗಳಲ್ಲಿ ಚಾವೆಜ್ ಪುನಃ ಅಧಿಕಾರಕ್ಕೇರಿದ ; ರಾಷ್ಟ್ರದ ಸೇನೆಯನ್ನು ತನಗೆ ವಿಧೇಯವಾಗಿ ಅವನು ಉಳಿಸಿಕೊಂಡಿದ್ದ. ಮೇಲಿದ್ದ ಧೂಳು ದೂರವಾಗಿ ಪರಿಸ್ಥಿತಿ ತಿಳಗೊಂಡಂತೆ ಆತ ಆಡಳಿತದ ಮೇಲಿನ ತನ್ನ ಹಿಡಿತವನ್ನು ಇನ್ನೂ ಬಿಗಿಗೊಳಿಸಿದ. ಅವನ ಮುಂದೆ 'ಆರ್ಥಿಕಪಾತಕಿ'ಗಳಷ್ಟೇ ಅಲ್ಲ, 'ತೋಳ'ಗಳು ಸಹ ವಿಫಲರಾಗಿದ್ದರು. ಅಮೆರಿಕಕ್ಕೆ ಉಳಿದಿದ್ದುದು ಮೂರನೆಯ ಪರ್ಯಾಯ – ಸೈನಿಕ ಕಾರ್ಯಾಚರಣೆಯದು – ಮಾತ್ರ, ಆದರೆ ಆಗಲೂ, ತಾತ್ಕಾಲಿಕವಾಗಿಯೇ ಆದರೂ, ಚಾವೆಜ್ ಬಚಾವಾದ. ಏಕಕಾಲದಲ್ಲಿ ಅಫಘಾನಿಸ್ತಾನ, ಇರಾಕ್ ಮತ್ತು ವೆನೆಜುವೆಲಾ ಈ ಮೂರರ ಮೇಲೂ ಆಕ್ರಮಣವೆಸಗುವಷ್ಟು ದಮ್ಮು ಬುಷ್ ಆಡಳಿತದ ಬಳಿ ಇರಲಿಲ್ಲ.

ಕೆಲವು ಅಂಕಿ ಅಂಶಗಳು

– ಹಸಿವು ಅಥವಾ ತತ್ಸಂಬಂಧಿತ ಕಾರಣಗಳಿಗಾಗಿ ಜಗತ್ತಿನಲ್ಲಿ ಪ್ರತಿನಿತ್ಯ ಸಾಯುವವರು ೨೪,೦೦೦.

– ವಿಶ್ವದಾದ್ಯಂತ ಶ್ರೀಮಂತ ದೇಶಗಳಲ್ಲಿನ ೧/೫ ರಷ್ಟು ಮಂದಿಯ ಆದಾಯ ಮತ್ತು ಅತ್ಯಂತ ಬಡರಾಷ್ಟ್ರಗಳಲ್ಲಿನ ೧/೫ ರಷ್ಟು ಮಂದಿಯ ಆದಾಯ–ಇವೆರಡರ

ನಡುವಿನ ಅನಿಪಾತ ೧೯೬೦ರಲ್ಲಿ ೩೦:೧ ಇದ್ದುದು ೧೯೯೫ರಲ್ಲಿ ೭೪:೧ ಆಗಿದೆ.

–೨೦೦೩ರಲ್ಲಿ ಇರಾಕ್ ವಿರುದ್ಧ ಎಸಗಲಾದ ಸಮರದಲ್ಲಿ ಅಮೆರಿಕ ಮಾಡಿದ ವೆಚ್ಚ ೮೭ ಬಿಲಿಯನ್ ಡಾಲರ್‌ಗಳು. ವಿಶ್ವಸಂಸ್ಥೆಯ ಅಂದಾಜಿನಂತೆ ಇದರ ಅರ್ಧಕ್ಕಿಂತ ಕಡಿಮೆ ವೆಚ್ಚದಲ್ಲಿ ಜಗತ್ತಿನ ಎಲ್ಲ ಜನರಿಗೂ ಶುದ್ಧ ನೀರು, ಸಾಕಷ್ಟು ಪೋಷಣೆ, ಶೌಚಸೇವೆ ಮತ್ತು ಪ್ರಾಥಮಿಕ ಶಿಕ್ಷಣವನ್ನು ಪೂರೈಸಬಹುದಾಗಿದೆ.

–೨೦೦೪ರ ಹೊತ್ತಿಗೆ ತೃತೀಯ ವಿಶ್ವದ ರಾಷ್ಟ್ರಗಳ ಸಾಲ ೨.೫ ಟ್ರಿಲಿಯನ್ ಡಾಲರ್‌ಗಳಿಗಿಂತ ಹೆಚ್ಚಾಗಿದ್ದು, ತತ್ಸಂಬಂಧಿತ ಸೇವಾ ಶುಲ್ಕ ಸಹ ವರ್ಷವೊಂದಕ್ಕೆ ೩೭೫ ಬಿಲಿಯನ್ ಡಾಲಾರ್‌ಗಳಷ್ಟಾಗಿತ್ತು. ಇದು 'ತೃತೀಯ ವಿಶ್ವ'ದ ಎಲ್ಲಾ ರಾಷ್ಟ್ರಗಳ ಆರೋಗ್ಯ ಮತ್ತು ಶಿಕ್ಷಣದ ಒಟ್ಟು ವೆಚ್ಚಕ್ಕಿಂತಲೂ ಅಧಿಕವಾಗಿದೆ.

–'ತೃತೀಯ ವಿಶ್ವ'ದ ದೇಶಗಳಲ್ಲಿ ಶೇ.೭೦–೯೦ರಷ್ಟು ಖಾಸಗೀ ಸಂಪತ್ತು ಮತ್ತು ಆಸ್ತಿ ಇತ್ಯಾದಿಯಿರುವುದು ಕೇವಲ ಶೇ. ೧ರಷ್ಟು ಜನರ ಬಳಿಮಾತ್ರ. ಅದರರ್ಥ ಇನ್ನುಳಿದ ಶೇ.೯೯ರಷ್ಟು ಜನರ ಬಳಿ ಒಟ್ಟು ಇರುವುದು ಅಲ್ಲಿನ ಸಂಪತ್ತಿನ ಶೇ.೧೦ ರಿಂದ ಶೇ.೩೦ರಷ್ಟು ಮಾತ್ರ. ಅಂತಹ ಬಡತನ ಆ ದೇಶಗಳಲ್ಲಿದೆ.

–ಇದಕ್ಕೆ ವ್ಯತಿರಿಕ್ತವಾಗಿ ಅಮೆರಿಕವು ಮಿಕ್ಕ ಜಗತ್ತಿನ ವೆಚ್ಚದಲ್ಲಿ ತಾನು ಸುಖ ಅನುಭವಿಸುತ್ತಿದೆ. ವಿಶ್ವದ ಸಂಪನ್ಮೂಲಗಳ ಪೈಕಿ ಶೇ.೩೬ರಷ್ಟನ್ನು ಅಮೆರಿಕವೊಂದೆ ಬಳಸುತ್ತಿದೆ ಎಂದು ಕೆಲವು ವರದಿಗಳು ಹೇಳಿವೆ.

ಗ್ರಂಥದ ಹಿನ್ನುಡಿಯಲ್ಲಿ ಪರ್ಕಿನ್ಸ್ ಕೆಲವು ವ್ಯವಹಾರಿಕ ಸಲಹೆಗಳನ್ನು ನೀಡಿದ್ದಾರೆ :

–ನಿಮ್ಮ ತೈಲದ ಬಳಕೆಯನ್ನು ಕಡಿತಗೊಳಿಸಿ.

–ಖುಷಿಗಾಗಿ ಖರೀದಿಗೆ (ಷಾಪಿಂಗ್) ಹೋಗಬೇಕಿನಿಸಿದಾಗ, ಅವಶ್ಯ ಪರ್ಯಾಯವಾಗಿ ಪುಸ್ತಕ ಓದಲು, ವ್ಯಾಯಾಮ ಮಾಡಲು, ಅಥವಾ ಧ್ಯಾನದಲ್ಲಿ ತೊಡಗಿರಲು ಅದೇ ಸಮಯವನ್ನು ಬಳಸಿ.

–ಮನೆಯ ಅಗತ್ಯಗಳು, ಉಡುಪು, ಕಾರ್, ಕಚೇರಿ ಮತ್ತು ನಿಮ್ಮ ಬದುಕಿನ ಇನ್ನಿತರ ಎಲ್ಲಾ ಸಂಗತಿಗಳಲ್ಲೂ ಕಡಿತಗೊಳಿಸುವ ನಿಟ್ಟಿನಲ್ಲಿ ಪ್ರಯತ್ನಿಸಿ.

–'ಮುಕ್ತ' ವ್ಯಾಪಾರಕ್ಕೆ ಸಂಬಂಧಿಸಿದ ಯಾವುದೇ ಒಪ್ಪಂದದ ಹಾಗೂ ಬಡಜನರ ಶೋಷಣೆ ಮಾಡುವಂತಹ ಅಥವಾ ಪರಿಸರದ ಸಂಪನ್ಮೂಲಗಳನ್ನು ಲಪಟಾಯಿಸುವಂತಹ ಯಾವುದೇ ಕಂಪನಿಯ ವಿರುದ್ಧ ಪ್ರತಿಭಟಿಸಿ.


–ಸಾಭಾರ: ಉತ್ಥಾನ

* * *

ಜನಪದ ನಿಲಯದ ಅಂತರಂಗದಲ್ಲಿ ...೩೭

– ಸುರೇಂದ್ರ ಕೌಲಗಿ

ಹರಿ ಚಿತ್ತ ಸತ್ಯ ಹರಿ ಚಿತ್ತ
ನರ ಚಿತ್ತಕ್ಕೆ ಬಂದದ್ದು ಲವಲೇಶ ನಡೆಯದು – ಪುರಂದರ ದಾಸರು



ಸಂಕ್ಷಿಪ್ತ ಶಿಕ್ಷಣ ಶಾಲೆಯನ್ನು ನಡೆಸಲು ಪ್ರತ್ಯೇಕವಾದ ಒಂದು ಸ್ಥಳ ಬೇಕಾಗಿತ್ತು. ಹಣದ ಅಭಾವದಿಂದಾಗಿ ಈ ಶಾಲೆಗಾಗಿ ಹೊಸಕಟ್ಟಡವೊಂದನ್ನು ಕಟ್ಟುವ ವಿಚಾರವನ್ನೇ ಮಾಡುವಂತಿರಲಿಲ್ಲ ಆದ್ದರಿಂದ ಅಕ್ಕಪಕ್ಕದಲ್ಲಿ ಯಾವುದಾದರೂ ಮನೆ ದೊರೆತಲ್ಲಿ ಅಲ್ಲಿ ಈ ಶಾಲೆಯನ್ನು ನಡೆಸುವುದೆಂದು ಯೋಚನೆಮಾಡಿದೆ. ಸುದೈವದಿಂದ ಇದು ಸಾಧ್ಯವಾಯಿತು. ನಾನು ವಾಸವಾಗಿದ್ದ ಕಲ್ಯಾಣಿ ಬೀದಿಯಲ್ಲಿಯ ಮನೆಯ ಹತ್ತಿರದಲ್ಲಿಯೆ ಮತ್ತು ಕರುಣಾಗೃಹದ ಮನೆಯಪಕ್ಕಕ್ಕೆ ಇದ್ದಂಥ ಒಂದು ಹಳೆಯ ಮನೆ ಬಾಡಿಗೆಗೆ ಸಿಕ್ಕಿತು ಅದು ತೊಟ್ಟಿ ಮನೆಯಾಗಿತ್ತು. ಮಣ್ಣಿನಗೋಡೆ ಮತ್ತು ಮಣ್ಣಿನನೆಲ. ಮಲಗಿಕೊಳ್ಳಲು ಸಾಕಾಗುವಷ್ಟು ಒಂದು ದೊಡ್ಡ ರೂಮು ಹಾಗೂ ಇನ್ನೊಂದು ಉಗ್ರಾಣದ ರೂಮು ಇದ್ದವು. ತರಗತಿಯನ್ನು ತೊಟ್ಟಿಯ ಪಕ್ಕದಲ್ಲಿಯೆ ಜಗಲಿಯ ಆಕಾರದಲ್ಲಿದ್ದ ಸ್ಥಳದಲ್ಲಿ ನಡೆಸುತ್ತಿದ್ದೆವು. ಡೆಸ್ಕ್‌ಗಳು ಇರಲಿಲ್ಲ. ವಿದ್ಯಾರ್ಥಿನಿಯರೆಲ್ಲರು ಬೆಂಚುಗಳ ಮೇಲೆ ಕುಳಿತುಕೊಂಡು ತೊಡೆಯಮೇಲೆ ಪುಸ್ತಕಗಳನ್ನು ಇಟ್ಟುಕೊಂಡು ಓದುವುದು, ಬರೆಯುವುದನ್ನು ಮಾಡುತ್ತಿದ್ದರು. ಮಳೆ ಬಂದಾಗ ತೊಟ್ಟಿಯ ಒಳಗೆ ನೀರು ಸುರಿಯುವಾಗ ಅಕ್ಕಪಕ್ಕದಲ್ಲೆಲ್ಲ ಮಳೆಯ ಎರಚಲು ತಾಗುತ್ತಿತ್ತು. ಈ ವಿದ್ಯಾರ್ಥಿನಿಯರಿಗೆ ಪಾಠ ಮಾಡಲು ಇನ್ನು ಇಬ್ಬರು ಅಧ್ಯಾಪಕಿಯರಿದ್ದರು. ಅವರಲ್ಲಿ ಒಬ್ಬರು ನಿವೃತ್ತರಾದಂಥ ಅಧ್ಯಾಪಕಿಯಾಗಿದ್ದರು. ಅವರಿಗೆ ವಯಸ್ಸಾಗಿತ್ತು, ಇನ್ನೊಬ್ಬರು ಚಿಕ್ಕ ವಯಸ್ಸಿನವರು. ನಾನೂ ಕೂಡ ವಿದ್ಯಾರ್ಥಿನಿಯರಿಗೆ ಇಂಗ್ಲಿಷ್ ಪಾಠವನ್ನು ಮಾಡುತ್ತಿದ್ದೆ. ಹೀಗೆ ಈ ಶಾಲೆ ನಡೆಯಿತು. ಒಟ್ಟು ೨೫ ವಿದ್ಯಾರ್ಥಿನಿಯರ ಐದು ತಂಡಗಳು ಈ ಶಾಲೆಯ ಮೂಲಕ ಎಸ್.ಎಸ್.ಎಲ್.ಸಿ ಪರೀಕ್ಷೆ ಪಾಸಾಗಿ ಮುಂದೆ ಬೇರೆ ಬೇರೆ ತರಬೇತಿಗಳನ್ನು ಪಡೆದುಕೊಂಡು ನೌಕರಿಯನ್ನು ಹಿಡಿದರು, ಇನ್ನು ಕೆಲವರು ಮದುವೆಯಾದರು. ಇಂದಿಗೂ ಸಹ ಇವರಲ್ಲಿ ಅನೇಕ ವಿದ್ಯಾರ್ಥಿನಿಯರು ಆಗಾಗ್ಗೆ ಮೇಲುಕೋಟೆಗೆ ಬಂದು ಗಿರಿಜಾರವರನ್ನು ಮತ್ತು ನನ್ನನ್ನು ಭೇಟಿಮಾಡುತ್ತಾರೆ. ಈ ಶಾಲೆಯ ಮೂಲಕ ತಮಗಾದ ಅನುಕೂಲವನ್ನು

ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಳ್ಳುತ್ತಾರೆ. ಹೀಗೆ ಟ್ರಸ್ಟ್‌ನ ಈ ಒಂದು ಕಾರ್ಯಕ್ರಮ ಅನೇಕ ಮಹಿಳೆಯರ ಜೀವನದಲ್ಲಿ ಉತ್ಕರ್ಷವನ್ನು, ಬದಲಾವಣೆಯನ್ನು ತಂದಿತೆಂಬುದು ಸಂತಸದ ಸಂಗತಿ. ಒಂದು ಅರ್ಥದಲ್ಲಿ ಗಾಂಧೀಜಿಯವರ ವಿಚಾರದ ಅಂದರೆ ಮಹಿಳೆಯರ ಅಭ್ಯುದಯದ ಕಾರ್ಯಕ್ರಮವೊಂದು ನೆರವೇರಿದಂತಾಯಿತು. ಆದರೆ ವಿಷಾದದ ಸಂಗತಿಯೇನೆಂದರೆ ಆಗ ಟ್ರಸ್ಟಿನ ಮಹಿಳೆಯರ ಈ ಕಾರ್ಯಕ್ರಮವನ್ನು ಹೆಚ್ಚು ಆಯಾಮಗಳಲ್ಲಿ ಹೇಗೆ ಬೆಳಸಬಹುದೆಂಬುದರ ಬಗ್ಗೆ ಚಿಂತನೆ ಇರಲಿಲ್ಲ. ಈ ಸಂಕ್ಷಿಪ್ತ ಶಾಲೆಯ ಕಾರಣದಿಂದಾಗಿ ಲಭಿಸಿದ್ದ ಸ್ತ್ರೀಶಕ್ತಿಯನ್ನು ಸಮಾಜ ಕಲ್ಯಾಣ ಚಟುವಟಿಕೆಗಳಿಗಾಗಿ ವ್ಯವಸ್ಥಿತವಾಗಿ ಬಳಸಿಕೊಳ್ಳಬಹುದಿತ್ತು. ತನ್ಮೂಲಕ ಗ್ರಾಮೀಣ ಪ್ರದೇಶದಲ್ಲಿ ಸಮಾಜ ಸುಧಾರಣೆಯ ಹೊಸ ಅಧ್ಯಾಯವನ್ನು ಪ್ರಾರಂಭಿಸಬಹುದಾಗಿತ್ತು. ಅಂಥ ಅವಕಾಶ ದೂರದೃಷ್ಟಿಯ ಕೊರತೆಯಿಂದ ಮತ್ತು ಟ್ರಸ್ಟಿನಲ್ಲಿಯ ನಾಯಕತ್ವದ ಕೊರತೆಯಿಂದ ಅದು ಸಾಧ್ಯವಾಗದೆ ಹೋಯಿತು.

ಸಂಕ್ಷಿಪ್ತ ಶಿಕ್ಷಣ ಶಾಲೆಯಲ್ಲಿ ಕರುಣಾಗೃದ ಕೆಲ ಅಂಗವಿಕಲ ಮಕ್ಕಳು ಓದುತ್ತಿದ್ದುದರಿಂದ ಮತ್ತು ಆ ಹೊತ್ತಿಗೆ ಕರುಣಾಗೃಹದಲ್ಲಿ ಹತ್ತಾರು ಮಕ್ಕಳು ಇದ್ದುದರಿಂದ ಕರುಣಾಗೃಹದ ಚಿಕ್ಕ ಅಡುಗೆ ಮನೆಯಲ್ಲಿಯೆ ಅಡುಗೆ ಮಾಡಿಸಿ ಅಲ್ಲಿಯೆ ಕರುಣಾಗೃಹದ ಮಕ್ಕಳು ಮತ್ತು ವಿದ್ಯಾರ್ಥಿನಿಯರು ಒಟ್ಟಿಗೆ ಊಟ ಮಾಡುತ್ತಿದ್ದರು. ಸಂಕ್ಷಿಪ್ತ ಶಿಕ್ಷಣ ಶಾಲೆಯ ವಿದ್ಯಾರ್ಥಿನಿಯರಿಂದ ಕರುಣಾಗೃಹದ ಅಂಗವಿಕಲ ಮಕ್ಕಳಿಗೆ ಬಹಳಷ್ಟು ನೆರವು ದೊರೆಯುತ್ತಿತ್ತು. ವಿದ್ಯಾರ್ಥಿನಿಯರು ಕರುಣಾಗೃಹದ ಮಕ್ಕಳನ್ನು ಪ್ರೀತಿಯಿಂದ ನೋಡುತ್ತಿದ್ದರು ಮತ್ತು ಅಗತ್ಯವಾದ ಕಡೆಯಲೆಲ್ಲ ಅವರ ಸೇವೆ ಮಾಡುತ್ತಿದ್ದರು. ಕರ್ನಾಟಕದಲ್ಲಿ ಬೇರೆಡೆ ಇಂಥ ಸಂಕ್ಷಿಪ್ತ ಶಿಕ್ಷಣಶಾಲೆಗಳು ನಡೆಯುತ್ತಿದ್ದರೂ ಅಲ್ಲಿ ಅಂಗವಿಕಲ ಮಕ್ಕಳ ಸೇವೆ ನಡೆಯುತ್ತಿರಲಿಲ್ಲ. ಮೇಲುಕೋಟೆಯ ಟ್ರಸ್ಟಿನ ಈ ಶಾಲೆಯ ವಿದ್ಯಾರ್ಥಿನಿಯರು ಹೆಚ್ಚಿನ ಅನುಭವ ಪಡೆದರು. ಮುಂದೆ ಅವರಿಗೆ ಅದು ಬಹಳ ಸಹಕಾರಿಯಾಯಿತು. ಸಂಕ್ಷಿಪ್ತ ಶಿಕ್ಷಣ ಶಾಲೆಯಲ್ಲಿ ಕೆಲವು ವಿದ್ಯಾರ್ಥಿನಿಯರು ಕೊಡಗಿನಿಂದ ಬಂದವರಾಗಿದ್ದರು ಅವರ ಒಡನಾಟದಿಂದಾಗಿ ಗಿರಿಜಾರವರು ಕೊಡಗು ಭಾಷೆಯನ್ನು ತಕ್ಕಮಟ್ಟಿಗೆ ಕಲಿತರು. ಇಂದಿಗೂ ಗಿರಿಜಾರವರು ಆ ಭಾಷೆಯನ್ನು ಮರೆತಿಲ್ಲ.

(ಮುಂದುವರಿಯುವುದು ....)

ವಾಚಕ ಮಿತ್ರರಲ್ಲಿ ವಿನಂತಿ

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಅದರಲ್ಲಿಯೂ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ 15 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

(–ಸಂಪಾದಕರು)

ತೆರೆದ-ಅಂಚೆ



KA / SK / MND / 470 / 2006-2008
Regd. no. KAR / KAN / 2000 / 3820

Sender

ಶ್ರೀಮತಿ/ ಶ್ರೀ..... ಬಿ. ಕೆ. ಮಾಧವಿ
11/25, 6ನೇ ಮೇನ್
K ಬ್ಲಾಕ್, ರಾಮಕೃಷ್ಣನಗರ
ಮೈಸೂರು - 570023.

MELUKOTE

JANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.DTP Sanketh, Melkote. Printed at INDIVARA, Nagamangala
Phone : 08236 – 298754 e-mail : janapada@yahoo.com